ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮೇ 31, 2024

ಸಂಪುಟ : 51 ಸಂಚಿಕೆ : 17 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







ಚಿತ್ರ: ರಫೀಕ್, ಜನತಾವಾಣಿ

ದಾವಣಗೆರೆಯ ಮುಖ್ಯ ರಸ್ತೆಗಳಲ್ಲಿರುವ ಕಾಂಪೌಂಡ್‌ಗಳ ಮೇಲೆ ಮಹಾನಗರ ಪಾಲಿಕೆಯಿಂದ ಪರಿಸರ ಪ್ರಜ್ಞೆ ಬೆಳೆಸುವಂತಹ ಚಿತ್ರಗಳನ್ನು ಬರೆಸಲಾಗುತ್ತಿದೆ. ಡೆಂಟಲ್ ಕಾಲೇಜು ರಸ್ತೆಯ ಪ್ರಥಮ ದರ್ಜೆ ಕಾಲೇಜು ಬಳಿ ಗುರುವಾರ ಚಿತ್ರ ಬಿಡಿಸುತ್ತಿರುವ ಕಲಾವಿದರು.

## ಪ್ರಜ್ವಲ್ ರೇವಣ್ಣ ಎಸ್‌ಐಟಿ ವಶಕ್ಕೆ

### ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಸಂಸದ

ಬೆಂಗಳೂರು, ಮೇ 30- ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಿ, ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಎಸ್‌ಐಟಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜರ್ಮನಿಯ ಮ್ಯೂನಿಚ್‌ನಿಂದ ಲುಫ್ತಾನ್ಸಾ ವಿಮಾನದಲ್ಲಿ ನೇರವಾಗಿ ನಗರದ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಇಂದು ತಡರಾತ್ರಿ 12.45ಕ್ಕೆ ಆಗಮಿಸುತ್ತಿದ್ದಂತೆ ಅವರನ್ನು ಸುತ್ತುವರೆದ ಎಸ್‌ಐಟಿ ತಂಡ ವಶಕ್ಕೆ ಪಡೆದುಕೊಂಡಿತು.

ರಾಜ್ಯದಲ್ಲಿ ನಡೆದ ಮೊದಲ ಹಂತದ ಹಾಸನ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಯೂ ಆಗಿರುವ ಪ್ರಜ್ವಲ್ ಮತದಾನ ಮುಗಿಸಿಕೊಂಡು ಅಂದು ರಾತ್ರಿಯೇ ವಿದೇಶಕ್ಕೆ ತೆರಳಿದ್ದರು.



**36 ದಿನಗಳ ನಂತರ ನಗರಕ್ಕೆ ಹಿಂತಿರುಗಿದ ಪ್ರಜ್ವಲ್**

ಅವರು ವಿದೇಶಕ್ಕೆ ತೆರಳಿದ ಎರಡು ದಿನಗಳ ನಂತರ ಲೈಂಗಿಕ ದೌರ್ಜನ್ಯ, ಅಪಹರಣ, ಬೆದರಿಕೆ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಎಸ್‌ಐಟಿ ರಚನೆ ಮಾಡಲಾಯಿತು.

ಇದೇ ವೇಳೆಗೆ ಅವರ ಲೈಂಗಿಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೆನ್‌ಡ್ರೈವ್ ಹಾಗೂ ಸಿಡಿಗಳು ಇಡೀ ಹಾಸನ ಜಿಲ್ಲೆಯಾದ್ಯಂತ ಹರಿದಾಡಿ ರಾಜ್ಯವಷ್ಟೇ ಅಲ್ಲದೆ ರಾಷ್ಟ್ರಾದ್ಯಂತ ತಲ್ಲಣ ಉಂಟು ಮಾಡಿತ್ತು. ಎಸ್‌ಐಟಿ ನೋಟಿಸ್ ಜಾರಿಗೊಳಿಸಿದ ನಂತರ ತಮ್ಮ ವಕೀಲರ ಮೂಲಕ ಉತ್ತರ ನೀಡಿದ್ದರಾದರೂ, ಅದರ ಮುಂದೆ ಅವರು ಹಾಜರಾಗಲಿಲ್ಲ.

ತಾತ, ದೇವೇಗೌಡರು, ಮಾಡಿದ ಮನವಿ ಹಾಗೂ ವಕೀಲರ ಸಲಹೆಯಂತೆ ಪ್ರಜ್ವಲ್ ರಾಷ್ಟ್ರಕ್ಕೆ ಹಿಂತಿರುಗುವ ಹಾಗೂ ಎಸ್‌ಐಟಿ ಮುಂದೆ ಹಾಜರಾಗುವ ತೀರ್ಮಾನವನ್ನು ವಿಡಿಯೋ ಸಂದೇಶದ ಮೂಲಕ ತಿಳಿಸಿದರು. (2ನೇ ಪುಟಕ್ಕೆ)

## ಯೂನಿಯನ್ ಬ್ಯಾಂಕ್‌ನ 3 ಅಧಿಕಾರಿಗಳ ಅಮಾನತ್ತು

### ವಾಲ್ಮೀಕಿ ನಿಗಮದಲ್ಲಿ ಅವ್ಯವಹಾರ : ಪೊಲೀಸ್, ಸಿಬಿಐ ಬಳಿ ದೂರು ದಾಖಲು

ಬೆಂಗಳೂರು, ಮೇ 30 – ಮಹರ್ಷಿ ವಾಲ್ಮೀಕಿ ನಿಗಮದ 94.73 ಕೋಟಿ ರೂ. ಹಣವನ್ನು ಅಕ್ರಮವಾಗಿ ಬೇರೆ ಖಾತೆಗೆ ವರ್ಗಾಯಿಸಿದ ಆರೋಪದ ಮೇಲೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಆರು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಗಮದ ಅಧಿಕಾರಿ ಚಂದ್ರಶೇಖರನ್ ಅವರು ಆತ್ಮಹತ್ಯೆ ಮಾಡಿಕೊಂಡ ನಂತರ ಅವ್ಯವಹಾರ ಬೆಳಕಿಗೆ ಬಂದಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ವಂಚನೆಯ ವಹಿವಾಟು ಬೆಳಕಿಗೆ ಬಂದ ತಕ್ಷಣ ಆ ಬಗ್ಗೆ ಘೋಷಣೆ ಮಾಡಲಾಗಿದೆ. ಸಮಗ್ರ ತನಿಖೆ ನಡೆಸಲು ಹಾಗೂ ತ್ವರಿತವಾಗಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಿ.ಬಿ.ಐ. ತನಿಖೆಗಾಗಿ ಔಪಚಾರಿಕ ದೂರು ದಾಖಲಿಸಲಾಗಿದೆ ಎಂದು ಹೇಳಿದೆ. ಈ ಪ್ರಕರಣದ ಹಿನ್ನೆಲೆಯಲ್ಲಿ ಬ್ಯಾಂಕ್‌ನ ಮೂರು ಶಾಖಾ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ.

ಮೇ 28ರಂದು ಪೊಲೀಸರಲ್ಲಿ ದೂರು ದಾಖಲಿಸಿರುವ ನಿಗಮದ ಪ್ರಧಾನ ವ್ಯವಸ್ಥಾಪಕ ಎ. ರಾಜಶೇಖರ್, ಎಂ.ಜಿ. ರಸ್ತೆಯಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಉನ್ನತ ಅಧಿಕಾರಿಗಳು ಅವ್ಯವಹಾದಲ್ಲಿ ಭಾಗಿಯಾಗಿದ್ದಾರೆ. ಇತರೆ ಮೂವರು ಸೇರಿಕೊಂಡು ನಿಗಮಕ್ಕೆ ನಷ್ಟವುಂಟು ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಫೆಬ್ರವರಿ 19ರಂದು ಮಹರ್ಷಿ ವಾಲ್ಮೀಕಿ ನಿಗಮದಲ್ಲಿನ ಹಣವನ್ನು ವಸಂತನಗರ ಶಾಖೆಯಿಂದ ಎಂ.ಜಿ. ರಸ್ತೆಯ ಶಾಖೆಗೆ ವರ್ಗಾಯಿಸಲಾಗಿತ್ತು. ಒಟ್ಟಾರೆ 187.33 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕುಗಳು ಹಾಗೂ ಖಜಾನೆಯಿಂದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ. ರಸ್ತೆಯ ಶಾಖೆಗೆ ವರ್ಗಾಯಿಸಲಾಗಿದೆ.

ನೀತಿ ಸಂಹಿತೆ ಇದ್ದ ಕಾರಣ ಬ್ಯಾಂಕನ್ನು ಸಂಪರ್ಕಿಸಿರಲಿಲ್ಲ. ಬ್ಯಾಂಕ್ ಅಧಿಕಾರಿಗಳೂ ಸಹ ಹೊಸ ಪಾಸ್‌ಬುಕ್ ಹಾಗೂ ಚೆಕ್ ಬುಕ್ ಕಳಿಸಲು ವಿಫಲವಾಗಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ. ಮೇ 21ರಂದು ಶಾಖೆಗೆ ಅಧಿಕಾರಿಗಳು ಭೇಟಿ ನೀಡಿದಾಗ, ಆ ಶಾಖೆಯ ಅಧಿಕಾರಿ ದಾಖಲೆಗಳನ್ನು ನೀಡಲು ನಿರಾಕರಿಸಿದರು. ಮೇ 22ರಂದು ನಿಗಮಕ್ಕೆ ಭೇಟಿ ನೀಡಿದ ಅಧಿಕಾರಿ, ದಾಖಲೆಗಳನ್ನು ಈಗಾಗಲೇ ನೀಡಲಾಗಿದೆ ಎಂದರು. ಆದರೆ, ಇದು ಸತ್ಯವಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಫೋರ್ಜರಿ ಪತ್ರಗಳು, ಫೋರ್ಜರಿ ಚೆಕ್ ಹಾಗೂ ಆರ್.ಟಿ.ಜಿ.ಎಸ್.ನಲ್ಲಿ ನಕಲಿ ಸಹಿ ಮಾಡುವ ಮೂಲಕ ಅಕ್ರಮವಾಗಿ ಹಣ ವರ್ಗಾಯಿಸಲಾಗಿದೆ ಎಂದೂ ದೂರಿನಲ್ಲಿ ತಿಳಿಸಲಾಗಿದೆ.

ಫೋರ್ಜರಿ ದಾಖಲೆಗಳನ್ನು ಆಧರಿಸಿ 94.73 ಕೋಟಿ ರೂ.ಗಳನ್ನು (2ನೇ ಪುಟಕ್ಕೆ)

## ಪಾಕ್ ಜಿಂದಾಬಾದ್ ಎಂದು ಅಪಪ್ರಚಾರ ಮಾಡಿದರೆ ಕ್ರಮ

ದಾವಣಗೆರೆ, ಮೇ 30 – ಚನ್ನಗಿರಿಯಲ್ಲಿ ಆದಿಲ್ ಸಾವಿನ ಪ್ರಕರಣ ಹಾಗೂ ಪೊಲೀಸ್ ಠಾಣೆಯ ಮೇಲೆ ನಡೆದ ದಾಳಿ ಎರಡರ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಚನ್ನಗಿರಿ ಪೊಲೀಸ್ ಠಾಣೆಗೆ ಭೇಟಿ ನೀಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಟ್ಕಾ ಆಡಿಸುತ್ತಿದ್ದ ವ್ಯಕ್ತಿ ಎಂದು ಠಾಣೆಗೆ ಕರೆದುಕೊಂಡು ಬಂದಾಗ ಸಾವು ಸಂಭವಿಸಿರುವುದು ಮತ್ತು ನಂತರ ಠಾಣೆಗೆ ನುಗ್ಗಿ ದಾಂಧಲೆ ಮಾಡಿ, ವಾಹನಗಳಿಗೆ ಹಾನಿ ಮಾಡಿರುವ ಎರಡೂ ಘಟನೆಗಳ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದರು.

ಸಿ.ಸಿ.ಟಿ.ವಿ. ದೃಶ್ಯಗಳನ್ನು ಆಧರಿಸಿ ತಪ್ಪಿತಸ್ಥರು ಹಾಗೂ ಕಲ್ಲು ತೂರಾಟ ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ವಿಚಾರಣೆ ನಡೆಸಿ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಪರಮೇಶ್ವರ್ ಹೇಳಿದರು.

ಆದಿಲ್ ಸಾವಿನ ಬಗ್ಗೆ ಎಫ್.ಎಸ್.ಎಲ್. ವರದಿ ಸಹ ಪಡೆಯಲಾಗುತ್ತಿದೆ. ವರದಿ ಬಂದ ಮೇಲೆ ಸತ್ಯಾಂಶ ತಿಳಿಯಲಿದೆ ಎಂದೂ ಅವರು ಹೇಳಿದರು.

ಪೊಲೀಸ್ ಅಧಿಕಾರಿಗಳ ಅಮಾನತ್ತು ಕ್ರಮವನ್ನು ಸಮರ್ಥಿಸಿಕೊಂಡ ಸಚಿವ ಪರಮೇಶ್ವರ್, ಇದೆಲ್ಲಾ ಆಡಳಿತಾತ್ಮಕ ಪ್ರಕ್ರಿಯೆಯ ಭಾಗ ಎಂದು ಹೇಳಿದರು.



**ಚನ್ನಗಿರಿ : ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಪರಮೇಶ್ವರ್ ಸಮರ್ಥನೆ**

**ಠಾಣೆ ಮೇಲಿನ ದಾಳಿ ಬಗ್ಗೆ ಸಿಸಿಟಿವಿ ಆಧರಿಸಿ ಕ್ರಮ**

ಯಾವಾಗಲೂ ತನಿಖೆಗೆ ಮೊದಲೇ ಮೇಲ್ನೋಟಕ್ಕೆ ಕಂಡು ಬರುವ ಅಂಶಗಳನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಲ್ಲೂ ಅದೇ ರೀತಿಯ ಕ್ರಮವಾಗಿದೆ. ತನಿಖೆಯ ನಂತರ ಏನೂ ತಪ್ಪಾಗಿಲ್ಲ ಎಂದಾದರೆ, ಮತ್ತೆ ಸೇವೆಗೆ ಕರೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಚನ್ನಗಿರಿ ಠಾಣೆ ಸೇರಿದಂತೆ ರಾಜ್ಯದೆಲ್ಲೆಡೆ ಪೊಲೀಸ್ ಸಿಬ್ಬಂದಿಯ ಕೊರತೆ ಇದೆ. ಕಳೆದ ನಾಲ್ಕು ವರ್ಷಗಳಲ್ಲಿ ನೇಮಕಾತಿ ಆಗದೇ (2ನೇ ಪುಟಕ್ಕೆ)

## ಕೇರಳ, ಈಶಾನ್ಯಕ್ಕೆ ಮುಂಗಾರು ಆಗಮನ

ನವದೆಹಲಿ, ಮೇ 30 – ಮುಂಗಾರು ಮಾರುತಗಳು ಕೇರಳ ಹಾಗೂ ಈಶಾನ್ಯ ಭಾಗಕ್ಕೆ ಗುರುವಾರ ಪ್ರವೇಶಿಸಿವೆ. ಇದರೊಂದಿಗೆ ನಾಲ್ಕು ತಿಂಗಳ ಮಳೆಗಾಲ ಆರಂಭವಾದಂತಾಗಿದೆ.

ಭಾನುವಾರ ಪಶ್ಚಿಮ ಬಂಗಾಳಕ್ಕೆ ಅಪ್ಪಳಿಸಿದ ರೆಮಲ್ ಚಂಡಮಾರುತದ ಕಾರಣದಿಂದಾಗಿ ಮುಂಗಾರು ಮಾರುತಗಳು ಬಂಗಾಳ ಕೊಲ್ಲಿಯ ಕಡೆ ಸೆಳೆಯಲ್ಪಟ್ಟಿವೆ. ಹೀಗಾಗಿ ವಾಡಿಕೆಗಿಂತ ಎರಡು ದಿನ ಮೊದಲೇ ಮುಂಗಾರು ಆರಂಭವಾದಂತಾಗಿದೆ.

ಕೇರಳ ಹಾಗೂ ಈಶಾನ್ಯ ಭಾಗ ಎರಡರಲ್ಲೂ ಒಂದೇ ದಿನ ಮುಂಗಾರು ಕಾಲಿಡುವುದು ಅಪರೂಪವಾಗಿದೆ. ಈ ಹಿಂದೆ 2017, 1997, 1995 ಹಾಗೂ 1991ರಲ್ಲಿ ಈ ರೀತಿ ಆಗಿತ್ತು. ಸಾಮಾನ್ಯವಾಗಿ ಜೂನ್ 1ರಂದು ಕೇರಳಕ್ಕೆ ಹಾಗೂ ಜೂನ್ 5ರಂದು ಈಶಾನ್ಯಕ್ಕೆ ಮುಂಗಾರು ಆಗಮಿಸುತ್ತದೆ. ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ಅರುಣಾಚಲ ಪ್ರದೇಶ, (2ನೇ ಪುಟಕ್ಕೆ)

## ಬ್ಯಾಂಕ್‌ಗಳಲ್ಲಿ ಹಕ್ಕು ಪಡೆಯದ ಠೇವಣಿ 78 ಸಾವಿರ ಕೋಟಿ ರೂ.

ಮುಂಬೈ, ಮೇ 30 – ಬ್ಯಾಂಕುಗಳಲ್ಲಿ ಹಕ್ಕು ಪಡೆಯದ ಠೇವಣಿ ಮೊತ್ತ 78,213 ಕೋಟಿ ರೂ.ಗಳಿಗೆ ತಲುಪಿದೆ. ರಿಸರ್ವ್ ಬ್ಯಾಂಕ್ ವಾರ್ಷಿಕ ಮಾಹಿತಿಯ ಪ್ರಕಾರ, ಮಾರ್ಚ್ 2024ರ ವೇಳೆಗೆ ಹಕ್ಕು ಪಡೆಯದ ಠೇವಣಿ ಶೇ.26ರಷ್ಟು ಹೆಚ್ಚಾಗಿದೆ.

ಸಹಕಾರಿ ಬ್ಯಾಂಕುಗಳೂ ಸೇರಿದಂತೆ, ಎಲ್ಲಾ ಬ್ಯಾಂಕುಗಳು ಹತ್ತು ವರ್ಷಕ್ಕಿಂತ ಹೆಚ್ಚು ಕಾಲ ಖಾತೆಗಳಲ್ಲಿ ಉಳಿದಿರುವ ಹಣವನ್ನು ರಿಸರ್ವ್ ಬ್ಯಾಂಕ್‌ನ ಶಿಕ್ಷಣ ಹಾಗೂ ಅರಿವು ಖಾತೆಗೆ ವರ್ಗಾಯಿಸುತ್ತವೆ.

2023ರ ಮಾರ್ಚ್ ವೇಳೆಗೆ ಈ ಖಾತೆಯಲ್ಲಿ 62,225 ಕೋಟಿ ರೂ. ಹಣವಿತ್ತು. ಅದು ಮಾರ್ಚ್ 2024ರ ವೇಳೆಗೆ 78,213 ಕೋಟಿ ರೂ.ಗಳಿಗೆ ಏರಿಕೆಯಾಗಿದೆ.

## ಸ್ಟೇಷನ್ ಮಾಸ್ಟರ್-ಸಿಗ್ನಲ್ ನಿರ್ವಾಹಕನ ಜಟಾಪಟಿ

**ಗಂಟೆಗೂ ಹೆಚ್ಚು ಕಾಲ ವಿಳಂಬವಾದ ವಾರಣಾಸಿ ರೈಲುಗಳು**

ನವದೆಹಲಿ, ಮೇ 29- ವಾರಣಾಸಿ ರೈಲ್ವೆ ನಿಲ್ದಾಣದ ಸ್ಟೇಷನ್ ಮಾಸ್ಟರ್ ಹಾಗೂ ಎಲೆಕ್ಟ್ರಿಕಲ್ ಸಿಗ್ನಲ್ ನಿರ್ವಾಹಕರ ನಡುವೆ ನಡೆದ ಜಟಾಪಟಿ ಕಾರಣದಿಂದ, ವಂದೇಭಾರತ್ ಸೇರಿದಂತೆ ಹಲವು ರೈಲುಗಳು ವಿಳಂಬವಾಗಿವೆ.

ಉತ್ತರ ರೈಲ್ವೆಯ ಲಖ್ನೌ ವಿಭಾಗದ ಮೂವರು ಹಿರಿಯ ಅಧಿಕಾರಿಗಳು ಈ ಘಟನೆಯ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಮೇ 28ರ ಬೆಳಿಗ್ಗೆ 7.30ರ ಸಮಯದಲ್ಲಿ ಉಭಯರ ನಡುವೆ ಜಗಳವಾಗಿ, ರೈಲುಗಳು ಸುಮಾರು 40 ನಿಮಿಷದಿಂದ ಒಂದೂವರೆ ಗಂಟೆ ಕಾಲ (2ನೇ ಪುಟಕ್ಕೆ)

## ಹಸಿರೀಕರಣಕ್ಕಾಗಿ ಸಿದ್ಧವಾಗುತ್ತಿವೆ ಲಕ್ಷ ಬೀಜದ ಉಂಡೆ

### ಕಿಸಾನ್ ಬಂಧು ವ್ಯವಸಾಯ, ಬೇಸಾಯ ನರ್ಸರಿ ಹಾಗೂ ನಮ್ಮ ದಾವಣಗೆರೆ ಸಂಸ್ಥೆಗಳ ಸಹಭಾಗಿತ್ವ

ದಾವಣಗೆರೆ, ಮೇ 30 - ಹಸಿರೀಕರಣಕ್ಕೆ ಉತ್ತೇಜನ ನೀಡಲು ನಗರದ ಕಿಸಾನ್ ಬಂಧು ವ್ಯವಸಾಯ ಬೇಸಾಯ ನರ್ಸರಿ ಹಾಗೂ ನಮ್ಮ ದಾವಣಗೆರೆ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 1 ಲಕ್ಷ ಬೀಜದ ಉಂಡೆಗಳನ್ನು ರೂಪಿಸಲು ಮುಂದಾಗಿವೆ.

ನಮ್ಮ ದಾವಣಗೆರೆ ಸಂಸ್ಥೆಯ ಸದಸ್ಯರು ಪ್ರತಿದಿನ ಬೀಜದ ಉಂಡೆ ರೂಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಜೊತೆ ಈಗ ಶಾಲಾ - ಕಾಲೇಜುಗಳ ವಿದ್ಯಾರ್ಥಿಗಳೂ ಕೈ ಜೋಡಿಸಿದ್ದಾರೆ.

ಬೀಜದ ಉಂಡೆ ಮಾಡುವ ಮೂಲಕ ಹಸಿರೀಕರಣ ಮಾಡುವುದು ಕಡಿಮೆ ವೆಚ್ಚದ ಹಾಗೂ ಸುಲಭ ಮಾರ್ಗವಾಗಿದೆ. ಇದಕ್ಕೆ ಹೆಚ್ಚು ಶ್ರಮದ ಅಗತ್ಯ ಬರುವುದಿಲ್ಲ. ಹೀಗಾಗಿ ವಿಶ್ವದಾದ್ಯಂತ ಬೀಜದ ಉಂಡೆಗಳ ಮಾರ್ಗ ಜನಪ್ರಿಯವಾಗುತ್ತಿದೆ.

ಈ ಬಗ್ಗೆ ಮಾತನಾಡಿರುವ ಕಿಸಾನ್ ಬಂಧು ವ್ಯವಸಾಯ ಬೇಸಾಯ ನರ್ಸರಿಯ ಕಾರ್ತಿಕ್ ಪಾಟೀಲ್, ಶಾಮನೂರು ಹಾಗೂ ಕುಂದುವಾಡದ ನಡುವಿನ ಹೆದ್ದಾರಿ ಪಕ್ಕ ಇರುವ ನರ್ಸರಿಯಲ್ಲಿ ಪ್ರತಿದಿನ ಬೀಜದ ಉಂಡೆಗಳನ್ನು ತಯಾರಿಸಲಾಗುತ್ತಿದೆ. ಈಗ 30 ಸಾವಿರ ಉಂಡೆಗಳು ಸಿದ್ಧವಾಗಿವೆ ಎಂದು ಹೇಳಿದ್ದಾರೆ.

ಇನ್ನೂ 70 ಸಾವಿರ ಉಂಡೆಗಳನ್ನು ರೂಪಿಸಲಾಗುವುದು. ಒಟ್ಟು ಲಕ್ಷ ಉಂಡೆ ರೂಪಿಸಿ ನಂತರ ಅವುಗಳನ್ನು ಸೂಕ್ತ ಜಾಗದಲ್ಲಿ ಹರಡಲಾಗುವುದು ಎಂದು ತಿಳಿಸಿದ್ದಾರೆ.

ಮಣ್ಣು ಹಾಗೂ ಗೊಬ್ಬರ ಬೆರೆಸಲಾಗುತ್ತದೆ. ಇದರಲ್ಲಿ ಬೀಜಗಳನ್ನು ತುಂಬಿ ಉಂಡೆ ಮಾಡಲಾಗುತ್ತದೆ. ಈ ಉಂಡೆಗಳನ್ನು ನಾಲ್ಕೈದು ದಿನ ಒಣಗಿಸಲಾಗುತ್ತದೆ. ಇದಕ್ಕಾಗಿ ನರ್ಸರಿಯಲ್ಲಿ ಮಣ್ಣು ಹಾಗೂ ಟ್ರೇ ಸಿದ್ಧವಿವೆ. ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರು ಹಾಗೂ ಶಾಲಾ - ಕಾಲೇಜು ವಿದ್ಯಾರ್ಥಿಗಳು ಯಾರೂ ಬೇಕಾದರೂ ಈ ಕಾರ್ಯದಲ್ಲಿ ಕೈ ಜೋಡಿಸಬಹುದು ಎಂದು ಪಾಟೀಲ್ ಹೇಳಿದ್ದಾರೆ. ನಗರದ ಕುಂದುವಾಡ ರಸ್ತೆಯಲ್ಲಿರುವ ಸಪ್ತಗಿರಿ ಶಾಲೆಯ 250 ಮಕ್ಕಳು ಬೀಜದ ಉಂಡೆ ರೂಪಿಸುವ ಕೆಲಸದಲ್ಲಿ ಭಾಗಿಯಾಗಿದ್ದರು. ಮಕ್ಕಳು 15 ಸಾವಿರದಷ್ಟು ಉಂಡೆಗಳನ್ನು ಮಾಡಿದ್ದಾರೆ. ನಗರದ ಅಶ್ವಿನಿ ಕಾಲೇಜು ವಿದ್ಯಾರ್ಥಿಗಳು ಉಂಡೆ ರೂಪಿಸಿದ್ದಾರೆ (2ನೇ ಪುಟಕ್ಕೆ)



**ಬೀಜದ ಉಂಡೆ ಸುಲಭ ಮಾರ್ಗ**

ಮಣ್ಣು ಹಾಗೂ ಗೊಬ್ಬರ ಬೆರೆಸಲಾಗುತ್ತದೆ. ಇದರಲ್ಲಿ ಬೀಜಗಳನ್ನು ತುಂಬಿ ಉಂಡೆ ಮಾಡಲಾಗುತ್ತದೆ. ಈ ಉಂಡೆಗಳನ್ನು ನಾಲ್ಕೈದು ದಿನ ಒಣಗಿಸಲಾಗುತ್ತದೆ. ಮಳೆ ಬಂದಾಗ ಉಂಡೆಯೊಳಗಿನ ಬೀಜಗಳು ಚಿಗುರೊಡೆದು ಸಸಿಗಳಾಗುತ್ತವೆ ಎಂದು ದಾವಣಗೆರೆ ವಿ.ವಿ. ಪ್ರಾಧ್ಯಾಪಕ ಡಾ. ಶಿಶುಪಾಲ್ ತಿಳಿಸಿದ್ದಾರೆ.

ಸಸಿಗಳನ್ನು ನೇರವಾಗಿ ನೆಡುವುದಕ್ಕೆ ಹೆಚ್ಚು ಶ್ರಮ ಬೇಕು. ಗುಂಡಿ ತೋಡುವುದು, ಸಸಿಗಳನ್ನು ನೆಡುವುದು ಹೆಚ್ಚು ಪರಿಶ್ರಮ ಬಯಸುತ್ತದೆ. ಬೀಜಗಳನ್ನು ನೇರವಾಗಿ ಹರಡಿದರೆ ಅಳಿಲು, ಹೆಗ್ಗಣ ಇತ್ಯಾದಿಗಳು ತಿಂದು ಹಾಳು ಮಾಡಬಹುದು. ಹೀಗಾಗಿ ಬೀಜದ ಉಂಡೆಗಳು ಹಸಿರೀಕರಣಕ್ಕೆ ಉತ್ತಮ ಮಾರ್ಗ ಎಂದು ಶಿಶುಪಾಲ್ ಅಭಿಪ್ರಾಯ ಪಟ್ಟಿದ್ದಾರೆ.

ಬೀಜದ ಉಂಡೆಗಳನ್ನು ಹರಡಿದಾಗ ಶೇ.40ರಷ್ಟು ಸಸಿಗಳಾಗಿದ್ದು ಕಂಡು ಬಂದಿದೆ. ಸರ್ಕಾರಿ ಜಾಗ ಹಾಗೂ ಲಭ್ಯವಿರುವ ಖಾಲಿ ಜಾಗಗಳಲ್ಲಿ ಬೀಜದ ಉಂಡೆಗಳ ಮೂಲಕ ಸಸಿಗಳನ್ನು ಬೆಳೆಸಲು ಅವಕಾಶವಿದೆ ಎಂದವರು ತಿಳಿಸಿದ್ದಾರೆ.

## ಅಗ್ನಿಬಾನ್ ರಾಕೆಟ್ ಪರೀಕ್ಷೆ ಯಶಸ್ವಿ

### 3ಡಿ ತಂತ್ರಜ್ಞಾನ ಆಧರಿತ ಸೆಮಿ ಕ್ರಯೋಜನಿಕ್ ರಾಕೆಟ್ ರೂಪಿಸಿರುವ ಅಗ್ನಿಕುಲ್




ನವದೆಹಲಿ, ಮೇ 30 – ಚೆನ್ನೈನ ನವೋದ್ಯಮ ಬಾಹ್ಯಾಕಾಶ ಕಂಪನಿಯಾದ ಅಗ್ನಿಕುಲ್ ಕಾಸ್ಮೋಸ್ ರೂಪಿಸಿರುವ ಅಗ್ನಿಬಾನ್ ರಾಕೆಟ್ ಪರೀಕ್ಷೆ ಯಶಸ್ಸು ಕಂಡಿದೆ. 3ಡಿ ತಂತ್ರಜ್ಞಾನ ಆಧರಿತ ಸೆಮಿ ಕ್ರಯೋಜನಿಕ್ ರಾಕೆಟ್ ಅನ್ನು ಶ್ರೀಹರಿಕೋಟಾದಲ್ಲಿರುವ ಕಂಪನಿಯ ಸ್ವಂತ ಉಡಾವಣಾ ತಾಣದಿಂದ ಪರೀಕ್ಷಿಸಲಾಗಿದೆ.

ಈ ಹಿಂದೆ ರಾಕೆಟ್‌ನ ನಾಲ್ಕು ಪರೀಕ್ಷೆ ಪ್ರಯತ್ನಗಳು ವಿಫಲವಾಗಿದ್ದವು. ಗುರುವಾರ ಬೆಳಿಗ್ಗೆ 7.15ರ ಸಮಯದಲ್ಲಿ ಅಗ್ನಿಬಾನ್ ಸಬ್ ಆರ್ಬಿಟಲ್ ಟೆಕ್ನಾಲಜಿ ಡೆಮಾನ್‌ಸ್ಟ್ರೇಟರ್ (ಎಸ್.ಒ.ಆರ್.ಟಿ.ಇ.ಡಿ.) ಪರೀಕ್ಷೆ ನಡೆಸಲಾಯಿತು. ನೇರ ಪ್ರಸಾರವಿಲ್ಲದೇ, ಕೆಲವೇ ಗಣ್ಯರ ಉಪಸ್ಥಿತಿಯಲ್ಲಿ ಪರೀಕ್ಷೆ ನಡೆಸಲಾಯಿತು. ಇಸ್ರೋದ ಸತೀಶ್ ಭವನ್ ಬಾಹ್ಯಾಕಾಶ ಕೇಂದ್ರದಲ್ಲಿ ಪರೀಕ್ಷೆ ನಡೆಸಲಾಯಿತು.

ಈ ರಾಕೆಟ್ ಅನ್ನು ಕಂಪನಿ ಸಂಪೂರ್ಣವಾಗಿ ತಾನೇ ನಿರ್ಮಿಸಿದೆ. ಇದು ವಿಶ್ವದ ಮೊದಲ 3ಡಿ ಮುದ್ರಣ ತಂತ್ರಜ್ಞಾನದ ಒಂದೇ ಬಿಡಿ ಭಾಗದ ಇಂಜಿನ್ ಹೊಂದಿದೆ. ಇದು ಭಾರತದ ಮೊದಲ ಸೆಮಿ ಕ್ರಯೋ ಇಂಜಿನ್ ಸಹ ಆಗಿದೆ ಎಂದು ಅಗ್ನಿಕುಲ್ ಕಾಸ್ಮೋಸ್ ಹೇಳಿಕೆಯಲ್ಲಿ ತಿಳಿಸಲಾಗಿದೆ. ಈ ರಾಕೆಟ್ ಕಕ್ಷೆಗಿಂತ ತಳ ಮಟ್ಟದ್ದಾಗಿದೆ. 2025ರ ವೇಳೆಗೆ ಕಕ್ಷೆಯ ಹಂತದ ರಾಕೆಟ್ ಉಡಾವಣೆಗೆ ಅಗ್ನಿಕುಲ್ ಯೋಜಿಸಿದೆ.

ಈ ಹಿಂದೆ ನವೆಂಬರ್ 2022 ರಂದು ಹೈದರಾಬಾದ್‌ನ ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ವಿಕ್ರಮ್ - ಎಸ್ ಎಂಬ ರಾಕೆಟ್ ಉಡಾವಣೆ ಮಾಡಿತ್ತು. ಇದು ಭಾರತದ ಮೊದಲ ಖಾಸಗಿ ರಾಕೆಟ್ ಆಗಿತ್ತು. ಈ ಬಗ್ಗೆ ಹೇಳಿಕೆ ನೀಡಿರುವ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್, ಅಗ್ನಿಬಾನ್ ರಾಕೆಟ್ ಹಲವು ವಿಷಯಗಳಲ್ಲಿ ಮೊದಲಿಗನಾಗಿದೆ. ಇದು (5ನೇ ಪುಟಕ್ಕೆ)

# ದವನ್ ಕಾಲೇಜಿನಿಂದ ಬೀದಿ ನಾಟಕ ಪ್ರದರ್ಶನ



ದಾವಣಗೆರೆ, ಮೇ 30 - ನಗರದ ಶಿವಾಜಿ ವೃತ್ತದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಮುಂದೆ ದವನ್ ಕಾಲೇಜಿನ ವಿದ್ಯಾರ್ಥಿಗಳು ನುಕ್ಕಡ್ ನಾಟಕ ಪ್ರದರ್ಶಿಸಿದರು.

ಇಂಟರ್‌ನೆಟ್ ಹ್ಯಾಕರ್‌ಗಳು, ದುರ್ಬಲತೆಗಳನ್ನು ಬಳಸಿಕೊಳ್ಳುವಲ್ಲಿ ಪ್ರವೀಣರು, ಡಿಜಿಟಲ್ ಯುಗದಲ್ಲಿ ಗಮನಾರ್ಹ ಬೆದರಿಕೆಯನ್ನು ಒಡ್ಡುತ್ತಾರೆ. ವಿವಿಧ ಅಂಶಗಳಿಂದ ಪ್ರೇರೇಪಿಸಲ್ಪಟ್ಟ ಅವರು ನೆಟ್‌ವರ್ಕ್‌ಗಳನ್ನು ನುಸುಳಲು, ಡೇಟಾವನ್ನು ಕದಿಯಲು ಮತ್ತು ಸೇವೆಗಳನ್ನು ಅಡ್ಡಿಪಡಿಸಲು ವೈವಿಧ್ಯಮಯ ತಂತ್ರಗಳನ್ನು ಬಳಸುತ್ತಾರೆ. ಅವರ ವಿಧಾನಗಳು ಮತ್ತು ಪ್ರೇರಣೆಗಳ ಆಳವಾದ ತಿಳುವಳಿಕೆ ಅಗತ್ಯ. ಆದ್ದರಿಂದ ಈ ಇಂಟರ್‌ನೆಟ್ ಹ್ಯಾಕರ್‌ನ ಕುರಿತು ಜಾಗೃತಿ ಮೂಡಿಸಾಲು ದವನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಮ್ಯಾನೇಜ್‌ಮೆಂಟ್ ಅಧ್ಯಯನದ ವಿದ್ಯಾರ್ಥಿಗಳು ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಬಿ.ಕಾಂ ಆಕಾಶ್ ಎ. ಯು, ಸಿ. ಜೆ ಧೀರಜ್, ಗೌರಿ.ಎಂ, ಐಶ್ವರ್ಯ ಎಂ. ಮತ್ತು ಇತರರು ನಾಟಕ ಪ್ರದರ್ಶಿಸಿದರು.

## ಶೀಘ್ರದಲ್ಲೇ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಸ್ಥಳಾಂತರ

ದಾವಣಗೆರೆ, ಮೇ 30- ಸ್ಮಾರ್ಟ್‌ಸಿಟಿ ಯೋಜನೆ ಅಡಿ ನಿರ್ಮಾಣಗೊಂಡ ನೂತನ ಕೆಎಸ್‌ಆರ್‌ಟಿ ಬಸ್ ನಿಲ್ದಾಣವು ಶೀಘ್ರದಲ್ಲೇ ತಾತ್ಕಾಲಿಕ ಸರ್ಕಾರಿ ಬಸ್ ನಿಲ್ದಾಣದಿಂದ ಸ್ಥಳಾಂತರಗೊಳ್ಳಲಿದೆ.

ಸ್ಟೇಡಿಯಂ ಬಳಿಯ ಪವರ್ ಗ್ರೀಡ್‌ನಿಂದ ಭೂಗತ ವಿದ್ಯುತ್ ಕೇಬಲ್ ಅಳವಡಿಕೆ ಪೂರ್ವಾನುಮತಿ ಸಿಕ್ಕಿದ್ದು, ಕೇಬಲ್ ಅಳವಡಿಕೆ ಪ್ರಕ್ರಿಯೆ ಮುಗಿದ ನಂತರ ಸ್ಥಳಾಂತರ ಮಾಡಲಿದ್ದೇವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಧಾನಿ ಮೋದಿ ಸ್ಪರ್ಧೆ ತಡೆ ಕೋರಿದ್ದ ಅರ್ಜಿ ವಜಾ

ನವದೆಹಲಿ, ಮೇ 30 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸ ಬೇಕು ಎಂದು ದಾಖಲಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಳ್ಳಿ ಹಾಕಿದೆ. ಪ್ರಧಾನಿ ಮೋದಿ ವಿರುದ್ಧ ದೀಪಕ್ ಕುಮಾರ್ ಎಂಬುವವರು ಬೇಜವಾಬ್ದಾರಿಯ ಹಾಗೂ ಆಧಾರ ರಹಿತ ಆರೋಪ ಮಾಡಿದ್ದಾರೆ ಎಂದು ನ್ಯಾಯಮೂರ್ತಿ ಸಚಿನ್ ದತ್ತ ಅವರು ಅರ್ಜಿ ತಳ್ಳಿ ಹಾಕಿದ್ದಾರೆ.

2018ರಲ್ಲಿ ಮೋದಿ ಹಾಗೂ ನಿಕಟವರ್ತಿಗಳು ನಾನು ಪೈಲಟ್ ಆಗಿದ್ದ ವಿಮಾನವನ್ನು ಪತನಗೊಳಿಸುವ ಸಂಚು ನಡೆಸಿದ್ದರು ಎಂದು ಅರ್ಜಿದಾರರು ಹೇಳಿದ್ದಾರೆ. ಈ ಅರ್ಜಿಯಲ್ಲಿ ಅಸ್ಪಷ್ಟ, ಆಧಾರ ರಹಿತ ಹಾಗೂ ಬೇಜವಾಬ್ದಾರಿ ಆರೋಪಗಳಿವೆ. ಇದು ದುರುದ್ದೇಶದ ಅರ್ಜಿ ಎಂಬಂತೆ ಕಂಡು ಬರುತ್ತಿದೆ. ಅರ್ಜಿ ಸಂಪೂರ್ಣ ಅಸಂಬದ್ಧವಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಸಂಚಲನಾತ್ಮಕ ಆರೋಪ ಮಾಡುವುದೇ ಈ ಅರ್ಜಿಯ ಉದ್ದೇಶವಾಗಿದೆ ಎಂದು ನ್ಯಾಯಾಲಯ ತಿಳಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಸ್ಪರ್ಧಿಸದಂತೆ ನಿರ್ಬಂಧಿಸಬೇಕು ಎಂದು ಅರ್ಜಿದಾರರು ಕೋರಿದ್ದನ್ನೂ ತಳ್ಳಿ ಹಾಕಲಾಗಿದೆ.

## ಖಡಕ್ ಪಾವಲಿ ಉರುಸ್ ಇಂದು ಅನ್ನ ಸಂತರ್ಪಣೆ



ದಾವಣಗೆರೆ ಶಿವಾಜಿನಗರ ಸುಲ್ತಾನ್ ಪೇಟೆಯಲ್ಲಿರುವ ಹಜರತ್ ಸೈಯದ್ ಖಡಕ್ ಪಾವಲಿ ಚಿಸ್ತಿ ಬಾಬಾರವರ ಉರುಸ್ ಅಂಗವಾಗಿ ಇಂದು ಮಧ್ಯಾಹ್ನ ದರ್ಗಾದ ಆವರಣದಲ್ಲಿ ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಡಿ.ಮಾಲತೇಶ್, ಮುಜಾವರ್ ಸೈಯದ್ ಸಾಬೀರ್, ಸಿಕಂದರ್ ಮತ್ತು ಸೈಯದ್ ತಿಳಿಸಿದ್ದಾರೆ.

## ಪ್ರಧಾನಿ ಹುದ್ದೆಯ ಘನತೆ ಕುಂದಿಸಿದ ಮೋದಿ



ನವದೆಹಲಿ, ಮೇ 30 – ಸಾರ್ವಜನಿಕ ಚರ್ಚೆ ಹಾಗೂ ಹುದ್ದೆಯ ಘನತೆ ಕುಂದಿಸಿದ ಮೊದಲ ಪ್ರಧಾನ ಮಂತ್ರಿ ನರೇಂದ್ರ ಮೋದಿ ಎಂದು ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಟೀಕಿಸಿದ್ದಾರೆ.

ಚುನಾವಣಾ ಪ್ರಚಾರದ ಸಮಯದಲ್ಲಿ ದ್ವೇಷ ಬಾಷಣದ ಮೂಲಕ ಅವರು ಪ್ರಧಾನಿ ಹುದ್ದೆಯ ಘನತೆ ತಗ್ಗಿಸಿದ್ದಾರೆ ಎಂದಿರುವ ಸಿಂಗ್, ಬಿಜೆಪಿ ಸರ್ಕಾರ ದೋಷಪೂರಿತ ಅಗ್ನಿವೀರ್ ಯೋಜನೆಯನ್ನು ಸೈನ್ಯದ ಮೇಲೆ ಹೇರಿದೆ ಎಂದು ಆರೋಪಿಸಿದ್ದಾರೆ. ಈ ಹಿಂದೆಯಾವ ಪ್ರಧಾನ ಮಂತ್ರಿಯೂ ಇಂತಹ ದ್ವೇಷದ, ಅಸಂವಿಧಾನಿಕ ಹಾಗೂ ಒರಟು ಭಾಷೆ ಬಳಸಿರಲಿಲ್ಲ. ಸಮಾಜದ ಒಂದು ನಿರ್ದಿಷ್ಟ ವರ್ಗ ಹಾಗೂ ಪ್ರತಿಪಕ್ಷಗಳ ವಿರುದ್ಧ ಇಂತಹ ಭಾಷೆ ಬಳಸಲಾಗಿದೆ. ಅವರು ನನ್ನ ಕುರಿತು ಕೆಲ ತಪ್ಪು ಹಳಿಕೆಗಳನ್ನೂ ನೀಡಿದ್ದಾರೆ. ನಾನು ಯಾವತ್ತೂ ಒಂದು ಸಮುದಾಯವನ್ನು ಇನ್ನೊಂದು ಸಮುದಾಯದ ವಿರುದ್ಧ ಎತ್ತಿ ಕಟ್ಟಿರಲಿಲ್ಲ ಎಂದೂ ಸಿಂಗ್ ಹೇಳಿದ್ದಾರೆ.

## ಹೊರಕೇರಿ ಇಂದು ವಯೋ ನಿವೃತ್ತಿ



ದಾವಣಗೆರೆ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಒಟ್ಟು 38 ವರ್ಷ 9 ತಿಂಗಳಿಂದ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿರುವ ಎಂ.ವಿ.ಹೊರಕೇರಿ ಅವರು ಕಳೆದ 3 ವರ್ಷ 9 ತಿಂಗಳಿಂದ ಜಿಲ್ಲಾ ಆರೋಗ್ಯ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇಂದು ಸೇವೆಯಿಂದ ವಯೋ ನಿವೃತ್ತಿ ಹೊಂದಲಿದ್ದಾರೆ.

ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ, ಜಿಲ್ಲಾ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹಾಗೂ ಆರೋಗ್ಯ ಇಲಾಖೆಯ ನೌಕರರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹೊರಕೇರಿ ಅವರ ಸೇವೆಯನ್ನು ಪರಿಗಣಿಸಿ 'ರಾಜ್ಯ ಮಟ್ಟದ ಸರ್ವೋತ್ತಮ ಪ್ರಶಸ್ತಿ' ನೀಡಲಾಗಿದೆ. ಮೂಲತಃ ರಾಣೇಬೆನ್ನೂರು ತಾಲ್ಲೂಕು ಮಾಕನೂರು ಗ್ರಾಮದವರಾದ ಹೊರಕೇರಿ ಅವರು ಸದ್ಯ ಹರಿಹರದಲ್ಲಿ ನೆಲೆಸಿದ್ದಾರೆ.

## ಈಶಾನ್ಯಕ್ಕೆ ಮುಂಗಾರು ಆಗಮನ

**(1ನೇ ಪುಟದಿಂದ)** ತ್ರಿಪುರ, ಮೇಘಾಲಯ ಹಾಗೂ ಅಸ್ಸಾಂಗಳ ಬಹುತೇಕ ಭಾಗಗಳಲ್ಲಿ ಮುಂಗಾರು ಹರಡಿದೆ. ಕೇರಳದಲ್ಲಿ ಕಳೆದ ಕೆಲ ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿದೆ. ಇದರಿಂದಾಗಿ ಮೇ ತಿಂಗಳಲ್ಲಿ ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆಯ 9,10, 11, ಮತ್ತು 12ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಅನಾವಶ್ಯಕ ವೆಚ್ಚದ ಆಡಂಬರದ ಮದುವೆ ಬೇಡ

### ತೆಗ್ಗಿನಮಠದಲ್ಲಿನ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶ್ರೀ ವರಸದ್ಯೋಜಾತ ಸ್ವಾಮೀಜಿ ಕಳಕಳಿ



ಹರಪನಹಳ್ಳಿ. ಮೇ 30- ಅನಾವಶ್ಯಕವಾಗಿ ಲಕ್ಷಾಂತರ ಹಣ ವೆಚ್ಚ ಮಾಡಿ ಆಡಂಬರದ ಮದುವೆ ಮಾಡುವುದಕ್ಕಿಂತ, ಸರಳವಾಗಿ ಮಾಡಬೇಕು. ಸಾಮೂಹಿಕ ಮದುವೆಗಳು ಭಾಗ್ಯದ ಮದುವೆಗಳಾಗಿವೆ ಎಂದು ತೆಗ್ಗಿನಮಠದ ಶ್ರೀ ವರಸದ್ಯೋ ಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ತೆಗ್ಗಿನ ಮಠದಲ್ಲಿ ಶ್ರೀ ತೆಗ್ಗಿನಮಠ ಗ್ರಾಮೀಣ ವಿಕಾಸ ಟ್ರಸ್ಟ್ ಹಾಗೂ ಶ್ರೀ ತೆಗ್ಗಿನಮಠ ಪುರಾಣ ಪ್ರವಚನ ಮತ್ತು ಸಾಮೂಹಿಕ ವಿವಾಹ ಸಮಿತಿ ವತಿಯಿಂದ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ 77ನೇ ಪುಣ್ಯಾರಾಧನೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಧರ್ಮಾರ್ಥ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿ ಶ್ರೀಗಳು ಮಾತನಾಡಿದರು.

ಸರಳ ಹಾಗೂ ಕಡಿಮೆ ವೆಚ್ಚದಲ್ಲಿ ಉಚಿತ ಸಾಮೂಹಿಕ ವಿವಾಹಗಳು ನಡೆದರೆ ಹೆಚ್ಚು ಅನುಕೂಲವಾಗುತ್ತದೆ. ಮದುವೆ ಮಾಡಿಕೊಂಡು ನಂತರ ಸಾಲ ತೀರಿಸುವುದಕ್ಕಾಗಿ ಎಷ್ಟೋ ಕುಟುಂಬಗಳು ಗುಳೇ ಹೋಗಿ ದುಡಿಯುವ ಗ್ರಾಮೀಣ ಕುಟುಂಬಗಳನ್ನು ನಾವು ಕಂಡಿದ್ದೇವೆ ಎಂದು ಅವರು ತಿಳಿಸಿದರು.

ಸಂಸಾರದಲ್ಲಿ ಬರುವ ಕಷ್ಟ, ಸುಖಗಳನ್ನು ಸಮಾನವಾಗಿ ಸ್ವೀಕರಿಸಿ, ಜೀವನದಲ್ಲಿ ದುಡುಕು, ಕೋಪ ನಿಮ್ಮ ಬದುಕನ್ನು ಹಾಳು ಮಾಡುತ್ತದೆ. ಪರಸ್ಪರರು ಅನ್ಯೋನ್ಯತೆಯಿಂದ ಬದುಕು ಸುಂದರ ಮಾಡಿಕೊಳ್ಳಿ. ಮನುಷ್ಯನಿಗೆ ಆಸೆ, ಬಯಕೆಗಳಿಗೆ ಮಿತಿಯಿಲ್ಲ. ಉತ್ತಮ ಕೆಲಸ ಮಾಡುವ ಮೂಲಕ ಜೀವನ ಸಾರ್ಥಕ ಮಾಡಿಕೊಳ್ಳಿ. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಸರ್ಕಾರ ಮಾಡುವ ಕೆಲಸವನ್ನು ತೆಗ್ಗಿನ ಮಠ ಮಾಡಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಮಾತನಾಡಿ, ಮದುವೆ ಸಾಲದ ಸುಳಿಯಲ್ಲಿ ಸಿಕ್ಕು ನಲುಗುವ ಬದಲು, ಸಾಮೂಹಿಕ ವಿವಾಹಗಳಲ್ಲಿ ಮದುವೆಯಾದರೆ ಆರ್ಥಿಕ ವೆಚ್ಚ ಕಡಿಮೆ ಯಾಗುತ್ತದೆ. ಇಂದಿನ ದುಬಾರಿ ಕಾಲದಲ್ಲಿ ಮದುವೆ ಮಾಡುವುದೆಂದರೆ ಕಷ್ಟದ ಕೆಲಸ. ಸಾಲ ಮಾಡಿ ಮದುವೆ ಮಾಡುವುದಕ್ಕಿಂತ, ಸಾಲವಿಲ್ಲದೆ ಸರಳ ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿಕೊಳ್ಳುವುದು ಒಳ್ಳೆಯ ಕೆಲಸ. ಸಾಮೂಹಿಕ ಮದುವೆಗಳು ಹಣ ಉಳಿತಾಯದ ಜೊತೆಗೆ ಸಮಾಜದಲ್ಲಿ ಸಾಮರಸ್ಯದ ಪ್ರತೀಕವಾಗಿವೆ ಎಂದರು.


ತೆಗ್ಗಿನ ಮಠದ ಕಾರ್ಯದರ್ಶಿ ಡಾ.ಟಿ.ಎಂ. ಚಂದ್ರಶೇಖರಯ್ಯ ಮಾತನಾಡಿ, ಅನ್ನ ದಾಸೋಹದ ಮೂಲಕ ದಾಸೋಹ ಮಠವನ್ನಾಗಿ ಮಾಡಿದ ಕೀರ್ತಿ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ಮಧ್ಯ ಕರ್ನಾಟಕದಲ್ಲಿ 65ಕ್ಕೂ ಹೆಚ್ಚು ವಿದ್ಯಾಸಂಸ್ಥೆ ಗಳನ್ನು ಕಟ್ಟಿ ಅಕ್ಷರ ದಾಸೋಹ ಮಾಡುವ ಮೂಲಕ ರಾಜ್ಯದಲ್ಲಿ ಅಕ್ಷರ ಕ್ರಾಂತಿ ಮಾಡಿದ ಹೆಗ್ಗಳಿಕೆ ಇದ್ದು, ಮುಂದಿನ ದಿನಗಳಲ್ಲಿ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಹೆಸರಿನಲ್ಲಿ ಜಾತ್ರೆ ನಡೆಸಲಾಗುವುದು ಎಂದರು.

ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ವಿ.ಎಸ್.ಸಿ ಮಾಜಿ ಅಧ್ಯಕ್ಷ ಅಸುಂಡಿ ಬಿ.ನಾಗರಾಜ ಗೌಡ್ರು, ಪ್ರಕೃತಿ ವಿದ್ಯಾಸಂಸ್ಥೆ ಅಧ್ಯಕ್ಷ ಶಶಿಧರ ಪೂಜಾರ್ ಮಾತನಾಡಿದರು.

ಜ್ಞಾನಗಂಗೋತ್ರಿ ಕ್ಯಾಂಪಸ್‌ನ ಆಡಳಿತಾ ಧಿಕಾರಿ ಟಿ.ಎಂ.ಪ್ರತೀಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಸದಸ್ಯರಾದ ಗೊಂಗಡಿ ನಾಗರಾಜ, ಲಾಟಿ ದಾದಾಪೀರ್, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅಧ್ಯಕ್ಷರಾದ ಟಿ.ಎಂ.ಲಲಿತಮ್ಮ, ಮುಖಂಡರಾದ ಹೆಚ್.ಎಂ.ಕೊಟ್ರಯ್ಯ, ಹುಲಿಕಟ್ಟಿ ಚಂದ್ರಪ್ಪ, ಮುದಗಲ್ ಗುರುನಾಥ, ಕೆ.ಎಂ.ಶಿವಕುಮಾರಸ್ವಾಮಿ, ಟಿ.ಎಂ.ಕೊಟ್ರಯ್ಯ, ಕೆ.ಎಂ.ಗುರುಸಿದ್ದಯ್ಯ, ಹುಳ್ಳಿ ಕೊಟ್ರೇಶಪ್ಪ, ಪ್ರಾಂಶುಪಾಲ ಟಿ.ಎಂ. ರಾಜಶೇಖರ್, ನಾಗೇಂದ್ರರಾವ್, ಅರುಣಕುಮಾರ್, ಟಿ.ಎಂ. ವಿಶ್ವನಾಥ, ಕೆ.ಎಂ.ಗುರುಸಿದ್ದಯ್ಯ, ಚಿಂದಿ ಗಿರೀಶ, ಜಿ.ಎಂ.ಪ್ರದೀಪ್ ಸೇರಿದಂತೆ, ಇತರರು ಇದ್ದರು,

## ಪ್ರಜ್ವಲ್ ರೇವಣ್ಣ ಎಸ್‌ಐಟಿ ವಶಕ್ಕೆ



**(1ನೇ ಪುಟದಿಂದ)** ರಾಷ್ಟ್ರಕ್ಕೆ ಹಿಂತಿರುಗುತ್ತಿದ್ದಂತೆ ತಮ್ಮನ್ನು ಬಂಧಿಸಬಹುದೆಂಬ ಆಲೋಚನೆಯಿಂದ ಪ್ರಜ್ವಲ್, ಜನ ಪ್ರತಿನಿಧಿಗಳ ನ್ಯಾಯಾಲಯದಲ್ಲಿ ತಮ್ಮ ವಿರುದ್ಧದ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

ಪ್ರಜ್ವಲ್ ಪರ ವಕೀಲರು ಬುಧವಾರವೇ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವಂತೆ ಮನವಿ ಮಾಡಿದರೂ ನ್ಯಾಯಾಲಯ ಮೇ 31ಕ್ಕೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತ್ತು. ಈ ಎಲ್ಲಾ ಬೆಳವಣಿಗೆಗಳ ಬೆನ್ನಲ್ಲೇ ಪ್ರಜ್ವಲ್ 36 ದಿನಗಳ ನಂತರ ನಗರಕ್ಕೆ ಹಿಂತಿರುಗಿದರು.

ಪ್ರಜ್ವಲ್ ಬಂಧನಕ್ಕಾಗಿ ಎಸ್‌ಐಟಿ ಎಲ್ಲಾ ರೀತಿಯ ಕಾನೂನನ್ನು ಬಳಕೆ ಮಾಡಿದ್ದರೂ ಅವರನ್ನು ಗುರುತಿಸಿ ಕರೆತರಲು ಸಾಧ್ಯವಾಗಿರಲಿಲ್ಲ.

ಸ್ವತಃ ಮುಖ್ಯಮಂತ್ರಿ ಅವರೇ ಪ್ರಧಾನಿ ಅವರಿಗೆ ಎರಡು ಬಾರಿ ಪತ್ರ ಬರೆದು ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಪಡಿಸುವಂತೆ ಮನವಿ ಮಾಡಿದ್ದರು.

ಇದಕ್ಕೆ ಪ್ರಧಾನಿ ಕಾರ್ಯಾಲಯ ಸ್ಪಂದಿಸಲಿಲ್ಲ, ಕಾನೂನು ರೀತ್ಯಾ ತನಿಖಾಧಿಕಾರಿಗಳು ವಿದೇಶಾಂಗ ಇಲಾಖೆಗೆ ಪತ್ರ ಬರೆದ ನಂತರವೇ ಪ್ರಜ್ವಲ್ ಪಾಸ್‌ಪೋರ್ಟ್ ರದ್ದು ಮಾಡುವ ಪ್ರಕ್ರಿಯೆ ಆರಂಭಗೊಂಡಿತು.

ಪ್ರಜ್ವಲ್ ಅವರ ಪ್ರಸಕ್ತ ಲೋಕಸಭಾ ಅವಧಿ ಪೂರ್ಣಗೊಳ್ಳುವ ಸಮಯ ಬಂದಿದ್ದರಿಂದ ಅವರಿಗೆ ನೀಡಿರುವ ರಾಜತಾಂತ್ರಿಕ ಪಾಸ್‌ಪೋರ್ಟ್ ಕೂಡ ರದ್ದಾಗುತ್ತಿತ್ತು.

ಇದೆಲ್ಲವನ್ನು ಅರಿತ ಪ್ರಜ್ವಲ್ ಕಡೆಗೂ ದೇಶಕ್ಕೆ ಹಿಂತಿರುಗಿ ಎಸ್‌ಐಟಿಗೆ ಶರಣಾಗಿ ಕಾನೂನು ಹೋರಾಟ ಮಾಡುವ ತೀರ್ಮಾನ ಕೈಗೊಂಡರು.

ಪ್ರಜ್ವಲ್ ನಗರಕ್ಕೆ ಹಿಂತಿರುಗುವುದು ಖಚಿತವಾಗುತ್ತಿದ್ದಂತೆ ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್, ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಸಮಾಲೋಚನಾ ಸಭೆ ಮುಗಿಯುತ್ತಿದ್ದಂತೆ ಹಿರಿಯ ಅಧಿಕಾರಿಗಳ ತಂಡ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬೀಡುಬಿಟ್ಟು, ವಿಮಾನ ನಿಲ್ದಾಣದ ಅಧಿಕಾರಿಗಳು, ಭದ್ರತಾ ಹಾಗೂ ವಲಸೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಪ್ರಜ್ವಲ್ ಪಾಸ್‌ಪೋರ್ಟ್ ಮುಟ್ಟುಗೋಲು ಹಾಕಿಕೊಂಡು ಅವರನ್ನು ತಮ್ಮ ಕಸ್ಟಡಿಗೆ ನೀಡುವಂತೆ ಎಸ್‌ಐಟಿ ಈಗಾಗಲೇ ರಾಷ್ಟ್ರದ ಎಲ್ಲಾ ವಿಮಾನ ನಿಲ್ದಾಣಗಳಿಗೆ ಸಂದೇಶ ರವಾನೆ ಮಾಡಿತ್ತು.

ಸಂದೇಶದ ರವಾನೆ ಹಿನ್ನೆಲೆಯಲ್ಲಿ ಪ್ರಜ್ವಲ್ ಬರುತ್ತಿದ್ದಂತೆ ಅವರ ಪಾಸ್‌ಪೋರ್ಟ್ ಅನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ಎಸ್‌ಐಟಿ ಅಧಿಕಾರಿಗಳಿಗೆ ಹಸ್ತಾಂತರ ಮಾಡಿದರು.

## ಸಿಗ್ನಲ್ ನಿರ್ವಾಹಕನ ಜಟಾಪಟಿ

**(1ನೇ ಪುಟದಿಂದ)** ವಿಳಂಬವಾಗಿದ್ದವು. ಪಾಟ್ನಾ ವಂದೇ ಭಾರತ್ ಎಕ್ಸ್‌ಪ್ರೆಸ್, ಬನಾರಸ್ - ಬಕ್ಸಾರ್ ಮೆಮು ಪ್ಯಾಸೆಂಜರ್ ಸ್ಪೆಷಲ್ ಸೇರಿದಂತೆ ಹಲವು ರೈಲುಗಳು ವಿಳಂಬವಾಗಿ ಸಂಚರಿಸಿವೆ. ಎಲೆಕ್ಟ್ರಿಕಲ್ ಸಿಗ್ನಲ್ ನಿರ್ವಾಹಕ ಶೆಹಜಾದ್ ಅವರು ಎಸ್.ಎಸ್. ಡಿ.ಎ.ಸಿ. ಪೆಟ್ಟಿಗೆ ತೆರೆಯಲು ಬಯಸಿದ್ದರು. ಆದರೆ, ಸೂಕ್ತ ಅನುಮತಿ ಇಲ್ಲದೇ ಬಾಕ್ಸ್ ತೆರೆಯದಂತೆ ಸ್ಟೇಷನ್ ಮಾಸ್ಟರ್ ಸರೋಜ್ ಕುಮಾರ್ ತಡೆದಿದ್ದರು. ಇದು ಉಭಯರ ನಡುವೆ ವಾಗ್ವಾದ, ನಂತರ ಘರ್ಷಣೆಗೆ ಕಾರಣವಾಯಿತು.

ಶೆಹಜಾದ್ ಕಲ್ಲಿನಿಂದ ತಲೆ ಹಾಗೂ ತೋಳಿಗೆ ಹೊಡೆದು ಗಾಯಗೊಳಿಸಿರುವುದಾಗಿ ಹಾಗೂ ಪ್ರಜ್ಞೆ ತಪ್ಪಿದ ಕಾರಣ ಕೆಲಸ ಮಾಡಲು ಸಾಧ್ಯವಾಗಲಿಲ್ಲ ಎಂದು ಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕುಮಾರ್ ದುರ್ವರ್ತನೆ ತೋರಿ ಅವಹೇಳನ ಮಾಡಿದ್ದಾರೆ. ನಾನು ರೀಸೆಟ್ ಬಾಕ್ಸ್ ತೆರೆಯಲು ಬಯಸಿರಲಿಲ್ಲ. ಅದರ ಕ್ರಮ ಸಂಖ್ಯೆ ಹಾಗೂ ಕಂಪನಿಯ ಹೆಸರು ಬರೆದುಕೊಳ್ಳಲು ಪ್ರಯತ್ನಿಸಿದ್ದೆ. ಇಷ್ಟಕ್ಕೆ ಕುಮಾರ್ ಕೊರಳಪಟ್ಟಿ ಹಿಡಿದು ಎಳೆದಾಡಿದ್ದಾರೆ ಹಾಗೂ ನನ್ನ ಎಡಗಣ್ಣಿಗೆ ಹೊಡೆದಿದ್ದಾರೆ. ಈ ನಡುವಿನ ಎಳೆದಾಟದಲ್ಲಿ ಇಬ್ಬರೂ ಬಿದ್ದು, ಇಬ್ಬರಿಗೂ ಗಾಯಗಳಾಗಿವೆ ಶೆಹಜಾದ್ ಹೇಳಿದ್ದಾರೆ. ಮೂವರು ಸದಸ್ಯರ ತನಿಖಾ ತಂಡ ಒಡಕಿನ ವರದಿ ನೀಡಿದೆ. ಇಬ್ಬರು ಶೆಹಜಾದ್ ತಪ್ಪಿದೆ ಎಂದು ಹೇಳಿದ್ದರೆ, ಮತ್ತೊಬ್ಬ ಅಧಿಕಾರಿ ಆಡಿಯೋ ವಾಯ್ಸ್ ರೆಕಾರ್ಡಿಂಗ್ ಆಲಿಸಿದ ನಂತರವೇ ನಿರ್ಧಾರಕ್ಕೆ ಬರಬೇಕು ಎಂದಿದ್ದಾರೆ.

## ಯುಬಿಡಿಟಿ ಕಾಲೇಜಿನಲ್ಲಿ ಇಂದು

ದಾವಣಗೆರೆಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವತಿಯಿಂದ ಆಯೋಜಿಸಿರುವ ಸಮಾರೋಪ ಸಮಾರಂಭ ಜರುಗಲಿದೆ.

ಸಾಹಿತಿ ಮತ್ತು ಉಪನ್ಯಾಸಕ ಮಹಾಂತೇಶ್ ಬಿ. ನಿಟ್ಟೂರು, ಇ ಅಂಡ್ ಇ ವಿಭಾಗದ ಛೇರ್ಮನ್ ಡಾ. ಮೌನೇಶಾಚಾರ್, ಅಶೋಕ್ ಕುಸಗೂರು ಮತ್ತಿತರರು ಭಾಗವಹಿಸಲಿದ್ದಾರೆ. ಪ್ರಾಚಾರ್ಯ ಡಾ. ಡಿ.ಪಿ. ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

## ಪುಷ್ಪ ಪಿ.ಉಮಚಗಿ ನಿಧನ



ದಾವಣಗೆರೆ ಸಿಟಿ ನಿಟುವಳ್ಳಿ, 1ನೇ ಮೇನ್, 1ನೇ ಕ್ರಾಸ್ ವಾಸಿ ದಿ. ಪ್ರಹ್ಲಾದ್ ಉಮಚಗಿ ಇವರ ಧರ್ಮಪತ್ನಿ

**ಶ್ರೀಮತಿ ಪುಷ್ಪ ಪಿ. ಉಮಚಗಿ (76)**

ಅವರು, ದಿನಾಂಕ 30.5.2024ರ ಗುರುವಾರ ಮಧ್ಯಾಹ್ನ 3 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರ, ಓರ್ವ ಪುತ್ರಿ ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.5.2024ರ ಶುಕ್ರವಾರ ಮಧ್ಯಾಹ್ನ 12ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

**ದುಃಖಿತ ಕುಟುಂಬದವರು, ಮೊ : 96865 03608, 98807 75654**

## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ : 06.05.1945 ಮರಣ : 30.05.2023

**ಹದಡಿ ಹೆಚ್.ಕೆ. ನಾಗಣ್ಣಶೆಟ್ಟಿ**

*ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷವಾಯಿತು.*
*ಸದಾ ನಿಮ್ಮ ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚ-ಹಸಿರಾಗಿದೆ.*
*ಅನುಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ, ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು.*

ಪತ್ನಿ: ಶ್ರೀಮತಿ ರತ್ನಮ್ಮ ನಾಗಣ್ಣಶೆಟ್ಟಿ ಹಾಗೂ ಶ್ರೀಮತಿ ಆಶಾ ಡಿ.ಎಸ್. ಶಂಕರಮೂರ್ತಿ ಹೆಚ್.ಎನ್. , ಮೊಮ್ಮಗಳು : ತೇಜಸ್ವಿನಿ ಎಸ್. ಹಾಗೂ ಅಪಾರ ಬಂಧು-ಮಿತ್ರರು, ಹದಡಿ. ಫೋ. : 99801 11370

## ಸಿದ್ಧವಾಗುತ್ತಿವೆ ಲಕ್ಷ ಬೀಜದ ಉಂಡೆ

**(1ನೇ ಪುಟದಿಂದ)** ಎಂದು ತಿಳಿಸಿದರು.

ದೇಶೀ ತಳಿಗಳಾದ ಬೇವು, ಹೊಂಗೆ, ಆಲ, ಅರಳಿ, ಬಾಗೆ ಮುಂತಾದ 20 ರೀತಿಯ ಬೀಜಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಪಾಟೀಲ್ ಹೇಳಿದರು.

ಈ ಬಗ್ಗೆ ಮಾತನಾಡಿರುವ ನಮ್ಮ ದಾವಣಗೆರೆ ಸಂಸ್ಥೆಯ ರೋಹಿತ್ ಜೈನ್, ಅರಣ್ಯ ಇಲಾಖೆಯನ್ನು ಸಂಪರ್ಕಿಸಿ, ಅವರು ಸೂಚಿಸುವ ಜಾಗದಲ್ಲಿ ಹಾಗೂ ಸೂಚಿಸುವ ರೀತಿಯ ಬೀಜಗಳನ್ನು ಹರಡಲಾಗುವುದು ಎಂದು ಹೇಳಿದರು.

ಮರಗಳು ನೆರಳು ಹಾಗೂ ಆಕ್ಸಿಜನ್‌ಗೆ ನೆರವಾಗುತ್ತವೆ. ಮನುಷ್ಯರಷ್ಟೇ ಅಲ್ಲದೇ, ಪ್ರಾಣಿ ಪಕ್ಷಿಗಳಿಗೂ ಹಸಿರೀಕರಣ ಸಹಕಾರಿ. ಬಾತಿ ಗುಡ್ಡ, ಕೊಂಡಜ್ಜಿ ಕೆರೆ, ಆವರಗೆರೆ ಕೆರೆ ಸೇರಿದಂತೆ ಹಲವೆಡೆ ಬೀಜದ ಉಂಡೆಗಳನ್ನು ಹರಡುವ ಉದ್ದೇಶವಿದೆ ಎಂದು ಹೇಳಿದರು.

ಈ ಬಗ್ಗೆ ಮಾತನಾಡಿರುವ ದಾವಣಗೆರೆ ವಿ.ವಿ. ಪ್ರಾಧ್ಯಾಪಕ ಡಾ. ಶಿಶುಪಾಲ್, ವಿಶ್ವವಿದ್ಯಾಲಯದಲ್ಲಿ ಮೈಕ್ರೋಬಯಾಲಜಿ ವಿದ್ಯಾರ್ಥಿಗಳ ಜೊತೆ ಸೇರಿ ಹೊಂಗೆ ಬೀಜದ 1,500 ಬೀಜದ ಉಂಡೆಗಳನ್ನು ತಯಾರಿಸಿದ್ದೇವೆ. ಈ ಉಂಡೆ ಬೀಜಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹರಡಲಾಗುವುದು ಎಂದು ಹೇಳಿದರು. ಬೀಜದ ಉಂಡೆಯ ಈ ಅಭಿಯಾನದಲ್ಲಿ ವೈಶಾಕ್ ಪಾಟೀಲ್, ಜಗದೀಶ್ ಪಾಟೀಲ್, ಕೊಟ್ರೇಶ್, ಮುರುಗೇಶ್, ಕೊಟ್ರೇಶ್ ಉತ್ತಂಗಿ ಮತ್ತಿತರರು ಸಾಥ್ ನೀಡಿದ್ದಾರೆ

### ರೈಲ್ವೆ ನಿಲ್ದಾಣಗಳಲ್ಲಿ ಹಸಿರೀಕರಣ

ರೈಲ್ವೆ ನಿಲ್ದಾಣದಲ್ಲಿ ಹಾಗೂ ರೈಲ್ವೆ ಜಾಗದಲ್ಲಿ ಹಸಿರೀಕರಣಕ್ಕಾಗಿ ಸಸಿಗಳನ್ನು ನೆಡುವ ಯೋಜನೆ ಇದೆ ಎಂದು ರೈಲ್ವೆಯ ಮೈಸೂರು ವಿಭಾಗದ ಸಲಹಾ ಸಮಿತಿ ಸದಸ್ಯರೂ ಆಗಿರುವ ನಮ್ಮ ದಾವಣಗೆರೆ ಸಂಸ್ಥೆಯ ರೋಹಿತ್ ಜೈನ್ ತಿಳಿಸಿದ್ದಾರೆ.

ಬರುವ ಜೂನ್ 5ರ ಪರಿಸರ ದಿನಾಚರಣೆಯ ದಿನದಂದು ಈ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಮೈಸೂರು ವಿಭಾಗದಲ್ಲಿ 3 ಸಾವಿರ ಸಸಿಗಳನ್ನು ನೆಡುವ ಉದ್ದೇಶವಿದೆ. ಇದರಲ್ಲಿ ನಮ್ಮ ದಾವಣಗೆರೆ ಸಂಸ್ಥೆಯೂ ಸಹಭಾಗಿಯಾಗಲಿದೆ ಎಂದು ಹೇಳಿದರು.

ರೈಲ್ವೆ ನಿಲ್ದಾಣದ ವ್ಯಾಪ್ತಿಯಲ್ಲಿ ಅಲಂಕಾರಿಕ ಸಸಿಗಳಿಗೆ ಆದ್ಯತೆ ನೀಡಲಾಗುವುದು. ವಿಶಾಲ ಜಾಗ ಇರುವ ಕಡೆ ಆಕ್ಸಿಜನ್ ನೀಡುವ ದೊಡ್ಡ ಮರವಾಗುವ ಸಸಿಗಳನ್ನು ನೆಡಲಾಗುವುದು. ಕೆಲ ನಿಲ್ದಾಣಗಳಲ್ಲಿ ಹೆಚ್ಚು ಜಾಗವಿದ್ದು, ಹಸಿರೀಕರಣಕ್ಕೆ ಹೆಚ್ಚಿನ ಅವಕಾಶವಿದೆ ಎಂದು ತಿಳಿಸಿದರು.

## ಜಿಂದಾಬಾದ್ ಎಂದು ಅಪಪ್ರಚಾರ ಮಾಡಿದರೆ ಕ್ರಮ

**(1ನೇ ಪುಟದಿಂದ)** ಇರುವುದೇ ಇದಕ್ಕೆ ಕಾರಣ. ಈಗ ನೇಮಕ ಪ್ರಕ್ರಿಯೆ ಆರಂಭಿಸಿದ್ದೇವೆ. ತರಬೇತಿ ಪೂರ್ಣಗೊಂಡ ತಕ್ಷಣ ಸಿಬ್ಬಂದಿ ಕಡಿಮೆ ಇರುವ ಠಾಣೆಗಳಿಗೆ ಪೊಲೀಸರನ್ನು ನಿಯೋಜನೆ ಮಾಡಲಾಗುವುದು ಎಂದರು.

ನಲ್ಲೂರಿನಲ್ಲಿ ಪೊಲೀಸ್ ಠಾಣೆಯ ಕುರಿತ ಪ್ರಸ್ತಾಪ ಬಂದಿದೆ. ಈ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸುವಾಗ ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೂಗಲಾಗಿದೆ ಎಂಬ ಬಗ್ಗೆ ಸಾಕ್ಷಿಗಳಿದ್ದರೆ ಪೊಲೀಸರಿಗೆ ನೀಡಲಿ, ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪರಮೇಶ್ವರ್ ಹೇಳಿದರು.

ಆ ರೀತಿಯ ಸಾಕ್ಷಿಗಳಿಲ್ಲದೇ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ್ದಾರೆ ಎಂಬ ಅಪಪ್ರಚಾರ ಮಾಡಿದರೆ, ಅಂಥವರ ವಿರುದ್ಧವೂ ಪೊಲೀಸರು ಕ್ರಮ ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು. ಇದಕ್ಕೂ ಮುಂಚೆ ಚನ್ನಗಿರಿ ಠಾಣೆಗೆ ಭೇಟಿ ನೀಡಿದ ಪರಮೇಶ್ವರ್, ಠಾಣೆಯಲ್ಲಿನ ಕೆಲ ಲೋಪಗಳ ಬಗ್ಗೆ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಿವಗಂಗಾ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಬ್ಯಾಂಕ್‌ನ 3 ಅಧಿಕಾರಿಗಳ ಅಮಾನತ್ತು

**(1ನೇ ಪುಟದಿಂದ)** ವರ್ಗಾವಣೆ ಮಾಡಿರುವುದು ಪಾಸ್‌ಬುಕ್ ಪರಿಶೀಲನೆಯಿಂದ ತಿಳಿದು ಬಂದಿದೆ ಎಂದೂ ಹೇಳಲಾಗಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಅವ್ಯವಹಾರ ತಡೆಯಲು ವಿಫಲವಾಗಿದೆ. ಅವ್ಯವಹಾರದ ಬಗ್ಗೆ ತಿಳಿದಿದ್ದರೂ, ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಅಕ್ರಮದ ಹಿನ್ನೆಲೆಯಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಡಿ. ಹಾಗೂ ಸಿಇಒ ಎ. ಮಣಿಮೇಖಲೈ, ಕಾರ್ಯಕಾರಿ ನಿರ್ದೇಶಕರಾದ ನಿತೇಶ್ ರಂಜನ್, ರಾಮಸುಬ್ರಮಣ್ಯಂ, ಸಂಜಯ್ ರುದ್ರ, ಪಂಕಜ್ ದ್ವಿವೇದಿ ಹಾಗೂ ಎಂ.ಜಿ. ರಸ್ತೆ ಬ್ಯಾಂಕ್ ಶಾಖೆಯ ಪ್ರಧಾನ ವ್ಯವಸ್ಥಾಪಕಿ ಸುಚಿಶಿತ ರಾವುಲ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಇಲ್ಲಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರು ಆಧರಿಸಿ ಮುಂದಿನ ತನಿಖೆ ಕೈಗೊಳ್ಳಲಾಗುತ್ತಿದೆ. ಈ ಪ್ರಕರಣದ ಬಗ್ಗೆ ಸಿ.ಐ.ಡಿ. ತಂಡ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಬೆಳವಣಿಗೆ ಬಗ್ಗೆ ಹೇಳಿಕೆ ನೀಡಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ವಂಚನೆಯ ವಹಿವಾಟಿನ ಬಗ್ಗೆ ಬ್ಯಾಂಕ್ ಪ್ರಾಮಾಣಿಕ ಕ್ರಮ ತೆಗೆದುಕೊಂಡಿದೆ. ಸಮಗ್ರ ತನಿಖೆ ನಡೆಸಿ, ತ್ವರಿತವಾಗಿ ದೋಷಿಗಳನ್ನು ಪತ್ತೆ ಮಾಡಲು ನಾವು ಸಿ.ಬಿ.ಐ. ಬಳಿ ದೂರು ದಾಖಲಿಸಿದ್ದೇವೆ ಎಂದು ತಿಳಿಸಿದೆ.

## ದೇವರಬೆಳಕೆರೆಯಲ್ಲಿಂದು ವಿಶ್ವ ತಂಬಾಕು ವಿರೋಧಿ ದಿನಾಚರಣೆ

ಮಲೇಬೆನ್ನೂರು ಸಮೀಪದ ದೇವರಬೆಳಕೆರೆ ಗ್ರಾಮದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ಯೋಜನೆಯ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕ್ರೊಳ್ಳಲಾಗಿದೆ ಎಂದು ಕೆ. ಬೇವಿನಹಳ್ಳಿ ವಲಯ ಮೇಲ್ವಿಚಾರಕ ಮಾರುತಿ ಗೌಡ ತಿಳಿಸಿದ್ದಾರೆ.

## ರಾಣೇಬೆನ್ನೂರು ಕೃಷಿ ಅಧಿಕಾರಿಗಳ ದಾಳಿ 5 ಲಕ್ಷ ರೂ. ಮೌಲ್ಯದ ನಕಲಿ ಬೀಜ ವಶ



ರಾಣೇಬೆನ್ನೂರು, ಮೇ 30- ತಾಲ್ಲೂಕಿನ ಅಂತರವಳ್ಳಿ ಗ್ರಾಮದ ಕೃಷ್ಣಪ್ಪ ಒಡೇರಹಳ್ಳಿ ಎಂಬುವವರ ಮನೆ ಮೇಲೆ ದಾಳಿ ಮಾಡಿದ ಕೃಷಿ ಇಲಾಖೆ ಅಧಿಕಾರಿಗಳು, ಸುಮಾರು 5 ಲಕ್ಷ ರೂ. ಮೌಲ್ಯದ, 50 ಕೆಜಿ ತೂಕದ 54 ಚೀಲಗಳು, ಒಟ್ಟು 27 ಕ್ವಿಂಟಾಲ್ ಮೆಕ್ಕೆಜೋಳದ ನಕಲಿ ಬೀಜಗಳನ್ನು ವಶಪಡಿಸಿಕೊಂಡಿದ್ದಾರೆ.

ಕೃಷಿ ನಿರ್ದೇಶಕರಾದ ಶಾಂತಮಣಿ, ಸಹಾಯಕ ನಿರ್ದೇಶಕ ಕೆ.ಎನ್ ಮಹಾರಡ್ಡಿ, ಅಧಿಕಾರಿ ಬಸವರಾಜ ಮುರುಗಣ್ಣನವರ, ವೀರೇಶ ಜಿ.ಎಂ. ಶಿವಾನಂದ ಹಾವೇರಿ ಈ ದಾಳಿ ನಡೆಸಿರುತ್ತಾರೆ. ಹಲಗೇರಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಲೇಬೆನ್ನೂರಿನಲ್ಲಿ ಇಂದು ಶ್ರೀನಿವಾಸ್ ಪರ ಪ್ರಚಾರ

ಪಟ್ಟಣದ ವಿವಿಧ ಶಾಲಾ - ಕಾಲೇಜುಗಳಲ್ಲಿ ಇಂದು ಬೆಳಗ್ಗೆ 11 ರಿಂದ ವಿಧಾನ ಪರಿಷತ್ ಚುನಾವಣೆಗೆ ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಡಿ.ಟಿ.ಶ್ರೀನಿವಾಸ್ ಪರ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮತಯಾಚನೆ ಮಾಡಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ ತಿಳಿಸಿದ್ದಾರೆ.

# ತ್ಯಜಿಸಿ ತಂಬಾಕು - ಉಜ್ವಲವಾಗುವುದು ಬದುಕು

ವಿಶ್ವ ಆರೋಗ್ಯ ಸಂಸ್ಥೆಯು ಪ್ರತೀ ವರ್ಷ ಮೇ 31 ರಂದು ವಿಶ್ವ ತಂಬಾಕು ರಹಿತ ದಿನವಾಗಿ ಆಚರಿಸುತ್ತಿದೆ. ತಂಬಾಕಿನಿಂದ ಬರುವ ಅನಾರೋಗ್ಯವನ್ನು ತಪ್ಪಿಸಲು , ಜನರಲ್ಲಿ ಈ ಕುರಿತು ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುವುದು.

"ವಿಶ್ವ ಆರೋಗ್ಯ ಸಂಸ್ಥೆ"ಯು ಸೂಚಿಸಿರುವ 2021 ನೇ ವರ್ಷದ "ತೊರೆಯಲು ಬದ್ದರಾಗಿ" (Commit to quit) ಎಂಬ ಘೋಷಣೆಯನ್ನು , ಭಾರತೀಯ ದಂತ ವೈದ್ಯಕೀಯ ಸಂಘವು " ನಾನು ಮಾಡಬಹುದು, ನಾನು ಮಾಡುತ್ತೇನೆ, ನಾನು ಮಾಡಿಯೇ ತೀರುತ್ತೇನೆ" - ( I can, I will, I must) ಎಂಬ ಘೋಷಣೆಯನ್ನಾಗಿ ಅಳವಡಿಸಿಕೊಂಡಿದೆ.



**ಕೆಡುಕಿಗೆ ಆಕರ್ಷಣೆ ಹೆಚ್ಚು. ಬೀಡಿ, ಸಿಗರೇಟು ಸೇರಿದಂತೆ ತಂಬಾಕನ್ನು ಬೇರೆ ಬೇರೆ ರೂಪಗಳಲ್ಲಿ ಸೇವಿಸುವುದು ಆರೋಗ್ಯಕ್ಕೆ ಹಾನಿಕರ. ಸಾರ್ವಜನಿಕ ಆರೋಗ್ಯದ ದೊಡ್ಡ ಬೆದರಿಕೆಗಳಲ್ಲಿ ತಂಬಾಕು ಸೇವನೆಯು ಒಂದಾಗಿದೆ.ಇದು ಕೇವಲ ಜೀವನ ನಷ್ಟವಷ್ಟೇ ಅಲ್ಲ, ಆರ್ಥಿಕ ನಷ್ಟವನ್ನು ತರುತ್ತದೆ ಎಂದು ಪದೇ ಪದೇ ಜಾಗೃತಿ ಮೂಡಿಸಿದರೂ ಧೂಮಪಾನ ಮಾಡುವವರ ಸಂಖ್ಯೆಯಲ್ಲೇನು ಕಡಿಮೆಯಾಗಿಲ್ಲವೆಂಬುದು ವಿಷಾದದ ಸಂಗತಿ.**

ಕೆಡುಕಿಗೆ ಆಕರ್ಷಣೆ ಹೆಚ್ಚು. ಬೀಡಿ, ಸಿಗರೇಟು ಸೇರಿದಂತೆ ತಂಬಾಕನ್ನು ಬೇರೆ ಬೇರೆ ರೂಪಗಳಲ್ಲಿ ಸೇವಿಸುವುದು ಆರೋಗ್ಯಕ್ಕೆ ಹಾನಿಕರ. ಸಾರ್ವಜನಿಕ ಆರೋಗ್ಯದ ದೊಡ್ಡ ಬೆದರಿಕೆಗಳಲ್ಲಿ ತಂಬಾಕು ಸೇವನೆಯೂ ಒಂದಾಗಿದೆ. ಇದು ಕೇವಲ ಜೀವನ ನಷ್ಟವಷ್ಟೇ ಅಲ್ಲ, ಆರ್ಥಿಕ ನಷ್ಟವನ್ನೂ ತರುತ್ತದೆ ಎಂದು ಪದೇ ಪದೇ ಜಾಗೃತಿ ಮೂಡಿಸಿದರೂ ಧೂಮಪಾನ ಮಾಡುವವರ ಸಂಖ್ಯೆಯಲ್ಲೇನು ಕಡಿಮೆಯಾಗಿಲ್ಲವೆಂಬುದು ವಿಷಾದದ ಸಂಗತಿ.

ತಂಬಾಕಿನಲ್ಲಿ ಸೈನೈಡ್, ಬೆಂಜೈನ್, ಫಾರ್ಮಾಲ್ಡಿಹೈಡ್, ಮೆಥನಾಲ್, ಆಸಿಟಿಲಿನ್, ಅಮೋನಿಯಮ್ ಎಂಬ ರಾಸಾಯನಿಕಗಳಿರುತ್ತವೆ. ಅವುಗಳಲ್ಲಿರುವ ಟಾರ್, ವಿಷಕಾರಕ ಅನಿಲಗಳು ದೇಹವನ್ನು ಸೇರಿ ನಮ್ಮ ದೇಹದಲ್ಲಿ ಸಂಗ್ರಹವಾಗುತ್ತಾ ಹೋಗುತ್ತದೆ. ತಂಬಾಕು ಸೇವನೆಯಿಂದ ಕೇವಲ ಗಂಟಲು, ಶ್ವಾಸಕೋಶ ಮಾತ್ರವಲ್ಲದೆ ಅಡಿಯಿಂದ- ಮುಡಿಯವರೆಗೆ ನಮ್ಮ ದೇಹದ ಪ್ರತಿಯೊಂದು ಜೀವಕೋಶದ ಮೇಲೆ ಅದು ಮಾರಕ ಪರಿಣಾಮವನ್ನುಂಟು ಮಾಡುತ್ತದೆ.

ತಂಬಾಕು ಸೇವನೆಯು ಇಂದು ವಿಶ್ವದಾದ್ಯಂತ ವರ್ಷಕ್ಕೆ 8 ದಶಲಕ್ಷಕ್ಕೂ ಹೆಚ್ಚು ಜನರನ್ನು ಕೊಲ್ಲುತ್ತಿದೆ. ತಂಬಾಕಿನ ಬಳಕೆ ಎರಡು ರೂಪಗಳಲ್ಲಿವೆ. ಹೊಗೆ ಸಹಿತ (ಸ್ಮೋಕ್), ಹೊಗೆರಹಿತ (ಸ್ಮೋಕ್ ಲೆಸ್). ಪ್ರತ್ಯಕ್ಷ ಧೂಮಪಾನ ಮಾಡುವವರಿಗಿಂತ ಪರೋಕ್ಷ ಧೂಮಪಾನಕ್ಕೆ ಬಲಿಯಾಗಿ 1.2 ದಶಲಕ್ಷ ಜನರು ಮರಣ ಹೊಂದುತ್ತಿದ್ದಾರೆ. ಭಾರತದಲ್ಲಿ ಸುಮಾರು 10 ಲಕ್ಷ ಜನರು ಬೀಡಿ, ಸಿಗರೇಟ್, ತಂಬಾಕಿನ ನೇರ ಸೇವನೆಯಿಂದ ಉಂಟಾಗುವ ಕ್ಯಾನ್ಸರ್ ಹಾಗು ಇತರೆ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇದರ ಪ್ರಮಾಣ ಸರಿಸುಮಾರು 8 ಸಾವಿರ. ತಂಬಾಕು ಸೇವನೆಯಿಂದ ಪ್ರತಿದಿನ 2700 ಮಂದಿ ಸಾವನ್ನಪ್ಪುತ್ತಿದ್ದಾರೆ.

ತಂಬಾಕು ಸೇವನೆಯು, ಹೇಗೆ ಅಮೂಲ್ಯ ಮಾನವ ಸಂಪತ್ತನ್ನು ನುಂಗಿ ನೊಣೆಯುತ್ತದೆ ಎಂಬುದನ್ನು ತೋರಿಸುತ್ತದೆ. ಚಟಕ್ಕೆ ಜೋತು ಬಿದ್ದು ಬಹು ಬೇಗ ಸಾವು ತಂದುಕೊಳ್ಳುವವರು ತಮ್ಮ ಕುಟುಂಬಗಳನ್ನು ಅನಾಥರನ್ನಾಗಿಸುತ್ತಾರೆ ಹಾಗು ಚಿಕಿತ್ಸೆಗೆಂದು ಸಾವಿರಾರು ರೂಪಾಯಿಗಳನ್ನು ವ್ಯಯ ಮಾಡುವುದರ ಮೂಲಕ ಕುಟುಂಬವನ್ನು ಚೇತರಿಸಿಕೊಳ್ಳಲಾರದ ಆರ್ಥಿಕ ಸಂಕಷ್ಟಕ್ಕೆ ದೂಡಿರುತ್ತಾರೆ. ಅಚ್ಚರಿಯ ವಿಷಯವೆಂದರೆ ಪ್ರತೀ ವರ್ಷ ಧೂಮಪಾನದ ಚಟಕ್ಕೆ ಬಹು ಬೇಗ ಒಲಿಯುವವರ ವಯಸ್ಸಿನಲ್ಲಿ ತೀವ್ರ ಇಳಿತವಾಗುತ್ತಿದೆ. ಯುವಕ- ಯುವತಿಯರು ಸಿಗರೇಟ್ ಸೇದುವುದು ಸ್ಟೈಲ್ ಎಂದು ಭಾವಿಸಿ, ಅವುಗಳಿಗೆ ದಾಸರಾಗುತ್ತಿದ್ದಾರೆ. ತಮ್ಮ ಆರೋಗ್ಯದ ಜೊತೆಗೆ ಇನ್ನಿತರರ ಆರೋಗ್ಯವನ್ನೂ ಹಾಳು ಮಾಡುತ್ತಿದ್ದಾರೆ. ರಾಷ್ಟ್ರೀಯ ಕ್ಯಾನ್ಸರ್ ನೋಂದಣಿ (ನ್ಯಾಷನಲ್ ಕ್ಯಾನ್ಸರ್ ರಿಜಿಸ್ಟ್ರಿ) ಪ್ರಕಾರ ದೇಶದಲ್ಲಿ ಶೇಕಡ 60 ರಷ್ಟು ಮಂದಿಯ ಕ್ಯಾನ್ಸರ್ ಅನ್ನು ಸುಲಭವಾಗಿ ತಡೆಯಬಹುದು.

**ತಂಬಾಕಿನಿಂದಾಗುವ / ಧೂಮಪಾನದ ದುಷ್ಪರಿಣಾಮಗಳು**

ತಂಬಾಕಿನ ಬಳಕೆಯಿಂದ ತಲೆಯಿಂದ ಪಾದದವರೆಗೆ ಯಾವ ಬಗೆಯ ಅಪಾಯಗಳು ಕಂಡುಬರುತ್ತವೆಯೆಂದು ವಿಂಗಡಿಸಿ, ಅರ್ಥಮಾಡಿಕೊಳ್ಳಬಹುದು.

● ಬೀಡಿ , ಸಿಗರೇಟ್ ನ ಹೊಗೆಯಲ್ಲಿ ಕ್ಯಾನ್ಸರ್ ರೋಗಕ್ಕೆ ಮೂಲ ಕಾರಣವಾದ ವಿಷವಸ್ತುವಿರುತ್ತದೆ. ಆದ್ದರಿಂದ ಧೂಮಪಾನಿಗಳಿಗೆ ಪ್ರಮುಖವಾಗಿ ಗಂಟಲು ಕ್ಯಾನ್ಸರ್ ಸಂಭವಿಸುವ ಅವಕಾಶ ಹೆಚ್ಚಾಗಿರುತ್ತದೆ.

● ಧೂಮಪಾನ ಮಾಡುವುದರಿಂದ ದೇಹಕ್ಕೆ ಆಮ್ಲಜನಕದ ಕೊರತೆಯುಂಟಾಗಿ ಮೆದುಳಿಗೆ ಹಾನಿ ತಟ್ಟುವುದು, ಹಸಿವು ಮುಚ್ಚಿಹೋಗುವುದು ಮತ್ತು ನಿದ್ರಾಹೀನತೆಯಿಂದ ಬಳಲುವರು

● ಧೂಮಪಾನದ ಹೊಗೆ ಬಿಡುವುದರಿಂದ ಜ್ಞಾನೇಂದ್ರಿಯಗಳ ಸಂವೇದನಾ ಶಕ್ತಿ ಕುಗ್ಗುವುದು

● ತಂಬಾಕಿನಲ್ಲಿರುವ ನಿಕೋಟಿನ್ ಎಂಬ ವಿಷವಸ್ತುವಿನ ಪ್ರಭಾವದಿಂದ ಜಠರದಲ್ಲಿ ಆಮ್ಲದ ಉತ್ಪತ್ತಿ ಹೆಚ್ಚುವುದು. ಇದರ ದೆಸೆಯಿಂದ ಹೊಟ್ಟೆಹುಣ್ಣು ಕಾಣಿಸಿಕೊಳ್ಳುವುದು.

● ಧೂಮಪಾನ ಮಾಡುವುದರಿಂದ ರಕ್ತನಾಳಗಳು ಗಾತ್ರದಲ್ಲಿ ಕುಗ್ಗುತ್ತವೆ. ಇದರಿಂದ ವ್ಯಕ್ತಿಯು ಅಧಿಕ ರಕ್ತದ ಒತ್ತಡದಿಂದ ನರಳುವ ಸಂಭವವುಂಟು.

- ಡಾ. ಪ್ರಮೋದ ಜಿ.ವಿ.
ಪ್ರೊಫೆಸರ್, ಓರಲ್ ಮೆಡಿಸಿನ್ ಮತ್ತು ರೇಡಿಯೋಲಜಿ ವಿಭಾಗ

ಡಾ. ದೀಪಶ್ರೀ ಪ್ರಮೋದ ಗುಜ್ಜರ್ ಉಪನ್ಯಾಸಕಿ, ಓರಲ್ ಮತ್ತು ಮ್ಯಾಕ್ಸಿಲ್ಲೊಫೇಶಿಯಲ್ ಪೆಥಾಲಜಿ ವಿಭಾಗ
ಬಾಪೂಜಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ದಾವಣಗೆರೆ.

● ರಕ್ತದ ಒತ್ತಡ ಹೆಚ್ಚುವುದರಿಂದ ಹೃದಯದ ಕಾರ್ಯ ಕಠಿಣವಾಗುವುದು. ಆದುದರಿಂದ ಎದೆನೋವು ಕಾಣಿಸಿಕೊಳ್ಳುವುದು. ಈ ಪರಿಸ್ಥಿತಿ ಮೇರೆ ಮೀರಿದಾಗ ರಕ್ತ ಪರಿಚಲನೆಗೆ ಅಡ್ಡಿಯುಂಟಾಗಿ ವ್ಯಕ್ತಿಯು ಮರಣ ಹೊಂದುವ ಸಾಧ್ಯತೆಯುಂಟು.

● ಧೂಮಪಾನದಿಂದ ಉಂಟಾಗುವ ಪ್ರಮುಖ ಅಪಾಯಗಳೆಂದರೆ ಹೃದಯಾಘಾತಗಳು, ಪಾರ್ಶ್ವವಾಯು, ಕ್ರಾನಿಕ್ ಅಬ್ಸ್ಟ್ರಕ್ಟಿವ್ ಪಲ್ಮನರಿ ಡಿಸೀಸ್( ಶ್ವಾಸಕೋಶದ ತೊಂದರೆ), ಶ್ವಾಸಕೋಶದ ಕ್ಯಾನ್ಸರ್ ಮತ್ತು ಬಾಯಿಯ ಕ್ಯಾನ್ಸರ್ ಹಾಗು ಪ್ಯಾನ್ ಕ್ರಿಯಾಟಿಕ್ ಕ್ಯಾನ್ಸರ್.

ಜ್ಞಾನೇಂದ್ರೀಯಗಳ ಮೇಲಾಗುವ ದುಷ್ಪರಿಣಾಮಗಳು:

● **ತಲೆ/ಮೆದುಳು :** ಸ್ಟ್ರೋಕ್ ಆಗುವುದು. ಮೆದುಳಿನಲ್ಲಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದು. ಇದರಿಂದ ರಕ್ತ ಸಂಚಾರವಾಗದೇ ಮೆದುಳಿನ ಆ ಭಾಗಗಳು ನಿಷ್ಕ್ರಿಯಗೊಳ್ಳುವುದು. ಮೆದುಳಿನ ಆ ಭಾಗಗಳ ಹತೋಟಿಯಲ್ಲಿದ್ದ ಕ್ರಿಯೆ ಗಳು ನಿಷ್ಕ್ರಿಯಗೊಳ್ಳುವವು. ನೆನಪಿನ ಸಮಸ್ಯೆಗಳು ಉಲ್ಬಣಗೊಳ್ಳುವವು.

● **ಕಣ್ಣುಗಳು :** ಕಣ್ಣಿನ ಪೊರೆ ಬರುವುದು. ಧೂಮಪಾನ ಮಾಡುವಾಗ ಹೊಗೆ ನೇರವಾಗಿ ಕಣ್ಣಿಗೆ ತೊಂದರೆಯುಂಟು ಮಾಡುವುದು ಮತ್ತು ಧೂಮಪಾನದಿಂದ ಅದರಲ್ಲಿನ ರಾಸಾಯನಿಕಗಳು ಶ್ವಾಸಕೋಶದ ರಕ್ತಕ್ಕೆ ಬೆರೆತು , ರಕ್ತದ ಮುಖಾಂತರ ಕಣ್ಣಿಗೆ ತಲುಪಿ ಹಾನಿಯುಂಟು ಮಾಡುವುದು.

● **ಮೂಗು :** ಮೂಗಿನಲ್ಲಿರುವ ರೋಮಗಳು ಹೊರಗಿನ ವಾತಾವರಣದಲ್ಲಿನ ಕಲ್ಮಶ ಹಾಗು ರೋಗಾಣುಗಳಿಂದ ರಕ್ಷಣೆಗಿರುತ್ತದೆ. ಆದರೆ ಧೂಮಪಾನಿಗಳಲ್ಲಿ ಈ ರೋಮಗಳು ಉಷ್ಣ ಹಾಗು ಹೊಗೆಯಿಂದ ಹಾಳಾಗುತ್ತವೆ ಮತ್ತು ಮೂಗಿನ ಒಳಗಿನ ಭಾಗ ಕೂಡ ಹಾಳಾಗುತ್ತದೆ. ಇದರಿಂದಾಗಿ ಅವರ ವಾಸನೆ ಗುರುತಿಸುವ ಸಾಮರ್ಥ್ಯ ಕ್ಷೀಣಿಸುತ್ತದೆ. ಇದಲ್ಲದೇ ಅವರು ಪದೇ ಪದೇ ವಿವಿಧ ರೀತಿಯ ರೋಗಾಣುಗಳಿಗೆ ತುತ್ತಾಗಿ ಶೀತ, ಸೈನಸೈಟೀಸ್ ತೊಂದರೆಗಳಿಂದ ಬಳಲುತ್ತಿರುತ್ತಾರೆ.


● **ಕಿವಿಗಳು :** ಒಳಗಿನ ಕಿವಿಯ ರಕ್ತಸಂಚಾರ ಮಾಡುವ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ವ್ಯಕ್ತಿಯ ಕಿವಿ ಕೇಳುವ ಸಾಮರ್ಥ್ಯ ಕಡಿಮೆಯಾಗುತ್ತದೆಯಲ್ಲದೇ, ವೇಗವಾಗಿ ಶ್ರವಣ ಸಾಮರ್ಥ್ಯ ಕಳೆದುಕೊಳ್ಳುತ್ತಾರೆ. ಧೂಮಪಾನ ಮಾಡುವ ವ್ಯಕ್ತಿಗಳಲ್ಲಿ ಮಧ್ಯ ಕಿವಿಯ ಸೋಂಕು ಬರುವ ಸಾಧ್ಯತೆಗಳು ಇತರೆ ಜನರಿಗಿಂತ ಮೂರು ಪಟ್ಟು ಹೆಚ್ಚಾಗಿರುತ್ತದೆ.

● **ಬಾಯಿ :** ಧೂಮಪಾನದಿಂದ ಬಾಯಿಯ ಇಡೀ ವಾತಾವರಣ ಹದಗೆಡುತ್ತದೆ. ಬಾಯಿಯ ವಿವಿಧ ಭಾಗಗಳಾದ ಹಲ್ಲು, ವಸಡು, ನಾಲಿಗೆ, ಪ್ಯಾಲೇಟ್ ( ಬಾಯಿಯ ಮೇಲ್ಭಾಗ), ಕಿರುನಾಲಿಗೆ, ಕೆನ್ನೆಯ ಮತ್ತು ತುಟಿಯ ಒಳಭಾಗಗಳು ಅಕ್ಷರಶಃ ನರಳಾಡುತ್ತಿರುತ್ತವೆ. (4ನೇ ಪುಟಕ್ಕೆ)

# ಇಂದು ಮಹಾಸಾಧ್ವಿ ಅಹಲ್ಯಾ ಬಾಯಿ ಹೋಳ್ಕರ್ ಜಯಂತಿ

ಭರತ ಭೂಮಿ. ಇಂಥ ಪುಣ್ಯ ಸ್ಥಳದಲ್ಲಿ ಭಾರತಾಂಬೆ ಹಲವಾರು ಮಹಾನ್ ವೀರ ಪುರುಷರಿಗೆ, ವೀರಗೃಹಿಣಿಯರಿಗೆ, ಸಾಧಕರಿಗೆ, ಪುಣ್ಯವಂತರಿಗೆ ಜನ್ಮ ನೀಡಿದ್ದಾಳೆ. ಅಂತಹವರ ಸಾಲಿನಲ್ಲಿ, ಇತಿಹಾಸ ಮರೆಯಲಾರದ ವೀರ ಮಹಿಳೆಯರಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಅತ್ಯಂತ ಪ್ರಸಿದ್ಧ ರಾಣಿಯಾಗಿ, ಸಾಧ್ವಿಯಾಗಿ, ಸುಧಾರಕಳಾಗಿ, ಧರ್ಮನಿಷ್ಠಳಾಗಿ, ಉದಾರಚರಿತಳಾಗಿ ಸಾಧನೆ ಮಾಡಿದ ಅಗ್ರಗಣ್ಯ ಅಪ್ಪಟ ಮಹಿಳೆ.

ಅಹಲ್ಯಾ ಬಾಯಿ ಹೋಳ್ಕರ್ ಮಹಾರಾಷ್ಟ್ರದ ಚೌಂಡಿ ಗ್ರಾಮದಲ್ಲಿ (ಈಗಿನ ಅಹಮದ್ ನಗರ ಜಿಲ್ಲೆ) ಮಂಕೋಜಿ ಶಿಂಧೆ ಮತ್ತು ಸುಶೀಲಾ ಶಿಂಧೆ ಎಂಬುವರ ಮುದ್ದಿನ ಮಗಳಾಗಿ 31 ಮೇ 1725ರಲ್ಲಿ ಕೊಲ್ಲಾಪುರ ಮಹಾಲಕ್ಷ್ಮಿಯ ಕೃಪಾ ಕಟಾಕ್ಷದಿಂದ ಮರಾಠಿ ಹಿಂದೂ ಕುಟುಂಬದಲ್ಲಿ ಜನಿಸಿದಳು. ಬಾಲ್ಯದಿಂದಲೂ ಅಹಲ್ಯಾ ಬಾಯಿ ತುಂಬಾ ಜ್ಞಾನವಂತೆ ಮತ್ತು ಉದಾರಚರಿತಳೂ, ಧರ್ಮನಿಷ್ಠೆಯುಳ್ಳವಳೂ ಆಗಿದ್ದಳು. ಹೋಳ್ಕರ್ ವಂಶದ ಮಲ್ಹಾರ ರಾವ್ ಹೋಳ್ಕರ್‌ನ ಮಗ ಖಂಡೇರಾಯನ ಪತ್ನಿಯಾಗಿದ್ದಳು. ಖಂಡೇರಾಯ 1754ರಲ್ಲಿ ಕುಂಬೇರರ ಮುತ್ತಿಗೆಯಲ್ಲಿ ಸತ್ತಾಗ, ಧೈರ್ಯ, ಸಾಹಸಕ್ಕೆ ಹೆಸರುವಾಸಿಯಾಗಿದ್ದ ಅಹಲ್ಯಾ ಬಾಯಿಗೆ ಮಾವ ಮಲ್ಹಾರರಾವ್ ಮತ್ತು ಅತ್ತೆ ಗೌತಮಬಾಯಿ ರಾಜಕೀಯ ಮತ್ತು ಮೌಲ್ಯಯುತ ತತ್ವಗಳ ತರಬೇತಿಯನ್ನು ನೀಡಿ ಧೀರ ಮಹಿಳೆಯನ್ನಾಗಿಸಿದರು. ಸತಿ ಪದ್ಧತಿಯನ್ನು ವಿರೋಧಿಸಿ ಆತ್ಮಸ್ಥೈರ್ಯ ತುಂಬಿ ಅಹಲ್ಯಾಬಾಯಿಗೆ ಆಡಳಿತದ ಚುಕ್ಕಾಣಿಯನ್ನು ನೀಡಿದರು.



ಮಾಳವದ ರಾಣಿಯಾದ ಅಹಲ್ಯಾಬಾಯಿ ಹೋಳ್ಕರ್ ನಾಗರಿಕ ಮತ್ತು ಮಿಲಿಟರಿ ತರಬೇತಿಯನ್ನು ಪಡೆದು ಅತ್ಯಂತ ದಕ್ಷತೆಯಿಂದ ಆಂತರಿಕ ಆಡಳಿತ ನಡೆಸಿ, ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿದಳು. ಮಹಿಳಾ ಅಂಗರಕ್ಷಕ ಪಡೆಯನ್ನು ಹೊಂದಿದ್ದ ಅಹಲ್ಯಾಬಾಯಿಗೆ ಪ್ರಜಾ ಕಲ್ಯಾಣವೇ ಮುಖ್ಯ ಗುರಿಯಾಗಿತ್ತು. ದಂಗೆ ಎದ್ದ ವೈರಿ ಪಡೆಗಳನ್ನು ದಕ್ಷತೆಯಿಂದ ಎದುರಿಸಿ ಮಾಳವ ಪ್ರಾಂತ್ಯದಲ್ಲಿ ಎಂದೂ ಕಾಣದಂತಹ ಸುಖೀರಾಜ್ಯ ಸ್ಥಾಪನೆ ಮಾಡಿದ್ದಳು. ಬ್ರಿಟಿಷ್ ಅಧಿಕಾರಿಯಾದ ಸರ್ ಜಾನ್ ಮ್ಯಾಲ್‌ಕೋಮ್ ಎಂಬುವವರು ಅಹಲ್ಯಾಬಾಯಿ ಹೋಳ್ಕರ್ ಅತ್ಯಂತ ಪರಿಶುದ್ಧಳಾದ ಅತ್ಯಂತ ಆದರ್ಶ ಪ್ರಾಯವಾದ ರಾಜ್ಯಾಡಳಿತಗಾರಳು ಎಂದು ಇವಳನ್ನು ವರ್ಣಿಸಿದ್ದಾರೆ.

ಅಹಲ್ಯಾಬಾಯಿ ಹೋಳ್ಕರ್ ಅವರ ಸ್ವಂತ ರಾಜಧಾನಿ ನರ್ಮದಾ ನದಿಯ ದಡದಲ್ಲಿರುವ ಮಹೇಶ್ವರವಾಗಿತ್ತು. ಅವರ ಮಾಳ್ವಾದಲ್ಲಿ ಮೂಲ ಸೌಕರ್ಯವನ್ನು ಪ್ರಜೆಗಳಿಗಾಗಿ ಕಲ್ಪಿಸಿದಳು. ಅನೇಕ ಹಿಂದೂ ದೇವಾಯಲಯಗಳಿಗೆ ನಿಯಮಿತ ಪೂಜೆಗಾಗಿ ದೇಣಿಗೆ ನೀಡಿದರು. ಮಾಳವ ಹೊರಗೆ, ಹಿಮಾಲಯದಿಂದ ದಕ್ಷಿಣ ಭಾರತದ ಅನೇಕ ತೀರ್ಥ ಕ್ಷೇತ್ರಗಳವರೆಗೆ ಭಾರತದ ಉಪಖಂಡದಾದ್ಯಂತ ಹಲವಾರು ಹಿಂದೂ ದೇವಾಲಯಗಳನ್ನು, ಉದ್ಯಾನವನಗಳನ್ನು, ಬಾವಿಗಳನ್ನು, ಘಟ್ಟಗಳನ್ನು, ವಿಶ್ರಾಂತಿ ಗೃಹಗಳನ್ನು, ಧರ್ಮ ಶಾಲೆಗಳನ್ನು ನಿರ್ಮಿಸಿದಳು.

18ನೇ ಶತಮಾನದಲ್ಲಿ ಅಹಲ್ಯಾಬಾಯಿ ಹೋಳ್ಕರ ಲಿಂಗ-ತಾರತಮ್ಯದ ವಿರುದ್ಧ ದನಿ ಎತ್ತಿದವರು. ಮಕ್ಕಳಿಲ್ಲದ ವಿಧವೆಯರ ಆಸ್ತಿ ಮುಟ್ಟುಗೋಲನ್ನು ವಿರೋಧಿಸಿದರು. ವ್ಯಾಪಾರಿಗಳು, ರೈತರು, ಶ್ರಮಿಕರನ್ನು ಬೆಂಬಲಿಸಿದರು. ವ್ಯಾಪಾರದಲ್ಲಿ ತೆರಿಗೆಯನ್ನು ಕಡಿತಗೊಳಿಸಿ, ವ್ಯಾಪಾರಾಭಿವೃದ್ಧಿ ಮಾಡಿದರು. ಗಡಿಗಳಿಗೆ ರಕ್ಷಣೆ ನೀಡಿದ್ದರು.

ಮಹೇಶ್ವರದಲ್ಲಿ ಅಹಲ್ಯಾಬಾಯಿ ಸಾಹಿತ್ಯ, ಸಂಗೀತ, ಕಲೆ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಪ್ರೋತ್ಸಾಹ ನೀಡಿ ಕಲೆಯ ನಗರವನ್ನಾಗಿಸಿದರು. ಪ್ರಸಿದ್ಧ ಮರಾಠಿ ಕವಿ ಮೋರೋಪಂತ್ ಮತ್ತು ಮಹರಾಷ್ಟ್ರದ ಶಾಹಿರ್ ಅನಂತಫಂಡಿಯಂತ ವಿದ್ವಾಂಸರನ್ನು ಹಾಗೂ ಸಂಸ್ಕೃತ ವಿದ್ವಾಂಸರಾದ (4ನೇ ಪುಟಕ್ಕೆ)



- ಸೌಭಾಗ್ಯ ಎಸ್.ಹಿರೇಮಠ
ಉಪನ್ಯಾಸಕರು
ಎಸ್.ಜೆ.ವಿ.ಪಿ. ಪಿಯು ಕಾಲೇಜು, ಹರಿಹರ

# ಮಕ್ಕಳನ್ನು ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ರಕ್ಷಿಸಿ



**ಇತ್ತೀಚೆಗೆ ಯೂಟ್ಯೂಬ್‌ನಲ್ಲಿ ಒಂದು ವಿಡಿಯೋ ನನ್ನ ಗಮನ ಸೆಳೆಯಿತು. ಆ ವೀಡಿಯೋದಲ್ಲಿ ಚಿಕ್ಕ ಬಾಲಕ ತನ್ನ ಮನಮೆಚ್ಚಿದ ಸಿನಿಮಾ ನಾಯಕರು ವಿಮಲ್ ತಿನ್ನುವ ಬಗೆಯನ್ನು ನೋಡಿ ತಾನು ತಿನ್ನಬೇಕೆಂದು ಅಂಗಡಿಗೆ ಹೋಗಿ ಕೊಂಡು ತರುತ್ತಾನೆ. ಅದನ್ನು ತಿಂದ ಬಳಿಕ ಆ ಬಾಲಕ ಅಸ್ವಸ್ಥನಾಗುತ್ತಾನೆ. ಇಂತಹ ಯೂಟ್ಯೂಬ್ ವಿಡಿಯೋಗಳು ಅದೆಷ್ಟು ಮುಗ್ದ ಮನಸ್ಸುಗಳನ್ನು ತಂಬಾಕಿನ ದುಶ್ಚಟಕ್ಕೆ ಗೀಳು ಮಾಡಿವೆಯೋ ಗೊತ್ತಿಲ್ಲ?.........**

ತಂಬಾಕು ಮನುಕುಲಕ್ಕೆ ಹೊಸತೇನಲ್ಲ. ಇದರ ಪರಿಚಯ ಕ್ರಿಸ್ತ ಪೂರ್ವ 600 ವರ್ಷಗಳ ಹಳೆಯದು. ತಂಬಾಕನ್ನು ಮೊಟ್ಟಮೊದಲ ಬಾರಿಗೆ ಕ್ರಿಸ್ಟೋಫರ್ ಕೊಲಂಬಸ್ ಯುರೋಪ್ ದೇಶಗಳಿಗೆ ಪರಿಚಯಿಸಿದರೆ, ಪೋರ್ಚುಗೀಸರು ಭಾರತಕ್ಕೆ ತಿಳಿಸಿದರು. ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಚರ್ಚೆಗಳು ನೂರಾರು ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು ಹಾಗು ಮೊಘಲ್ ಸಾಮ್ರಾಜ್ಯದ ಚಕ್ರವರ್ತಿ ಜಹಾಂಗೀರ್ ಹದಿನಾರನೇ ಶತಮಾನದಲ್ಲಿಯೇ ಇದರ ಬಳಕೆಯನ್ನು ಭಾರತದಲ್ಲಿ ನಿಷೇಧಿಸಿದ್ದನು. ಸಿಖ್ಖರ ಗುರುಗಳಾದ ಗುರುಗೋವಿಂದ್‌ಸಿಂಗ್‌ರವರು ಕೂಡ ತಂಬಾಕು ಬಳಕೆಯನ್ನು ಸಿಖ್ಖ್ ಸಮುದಾಯದಲ್ಲಿ ನಿಷೇಧಿಸಿದ್ದರು. ಇತಿಹಾಸದಲ್ಲಿ ತಂಬಾಕು ನಿಷೇಧದ ಬಗ್ಗೆ ಹಲವಾರು ಉಲ್ಲೇಖಗಳಿದ್ದರೂ ಇಂದಿಗೂ ತಂಬಾಕು ಭೋಗದ ವಸ್ತುವಾಗಿ ಅಗ್ರ ಸ್ಥಾನ ಪಡೆದುಕೊಂಡಿದೆ.

ನಮ್ಮ ದೇಶದಲ್ಲಿ ತಂಬಾಕು ಧೂಮಯುಕ್ತ (ಸಿಗರೇಟ್, ಬೀಡಿ) ಮತ್ತು ಧೂಮರಹಿತ (ಗುಟ್ಕಾ, ಪಾನ್ ಮಸಾಲಾ) ರೂಪದಲ್ಲಿ ಬಳಕೆಯಾಗುತ್ತಿದೆ. ನಗರಗಳಲ್ಲಿ ಸಿಗರೇಟ್ ಸೇವನೆ ಹೆಚ್ಚಾಗಿ ಕಂಡು ಬಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಗುಟ್ಕಾ ಅತಿ ಹೆಚ್ಚು ಜನಪ್ರಿಯವಾಗಿದೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಪ್ರತಿ ವರ್ಷ ಎರಡು ಮಿಲಿಯನ್ ಹೊಸ ವ್ಯಸನಿಗಳು ಸೇರ್ಪಡೆಯಾಗುತ್ತಿದ್ದಾರೆ, ಯುವಪೀಳಿಗೆ ಇಲೆಕ್ಟ್ರಾನಿಕ್ ಸಿಗರೇಟ್‌ನತ್ತ ಆಕರ್ಷಿತವಾಗುತ್ತಿದೆ. ದಿಗ್ಭ್ರಮೆಗೊಳಿಸುವ ಇಂತಹ ವರದಿಗಳಿಗೆ ಮೂಲ ಕಾರಣಗಳು ಕುಟುಂಬಗಳಲ್ಲಿ ತಂಬಾಕಿನ ಬಳಕೆ, ಸ್ನೇಹಿತರ ಪ್ರಭಾವ, ಕುತೂಹಲ, ನೆಚ್ಚಿನ ಹೀರೋಗಳ ಅನುಕರಣೆ, ಸುಲಭವಾಗಿ ಲಭ್ಯವಿರುವುದು, ಭಾವನಾತ್ಮಕ ಹಾಗು ಮಾನಸಿಕ ಸಮಸ್ಯೆಗಳು ಇತ್ಯಾದಿ. ನಮ್ಮ ದೇಶದ ಮಹಾನಗರಗಳಲ್ಲಿ ಕಾಣಸಿಗುವ ಬೀದಿ ಮಕ್ಕಳ ಅಂಧಕಾರದ ರಸ್ತೆ ಬಳಿಯ ಜೀವನ, ವಯಸ್ಸಿಗೆ ಮೀರಿದ ಕೆಲಸ, ನಿರಂತರ ಹಸಿವು, ಅಸಹಾಯಕತೆ ತಂಬಾಕಿನ ದುಶ್ಚಟಕ್ಕೆ ಬಲಿಯಾಗಿಸುತ್ತಿವೆ. ಪ್ರತಿ ಬಾರಿ ತಂಬಾಕು ಉಪಯೋಗಿಸಿದಾಗ ಇದರಲ್ಲಿರುವ ನಿಕೋಟಿನ್ ಅಂಶವು ಮೆದುಳನ್ನು ತಲುಪಿ ಆಹ್ಲಾದವನ್ನು ನೀಡುವ ಹಾರ್ಮೋನ್‌ಗಳನ್ನು ಉತ್ಪತ್ತಿ ಮಾಡಿ, ಮನಸ್ಸನ್ನು ಉಲ್ಲಾಸಗೊಳಿಸುವುದರ ಜೊತೆಗೆ ಹಸಿವು, ನಿದ್ರೆಯನ್ನು ಸಹ ನಿಯಂತ್ರಿಸುವುದರಲ್ಲಿ ಸಹಾಯ ಮಾಡುತ್ತವೆ. ಈ ಕಾರಣಗಳಿಂದಾಗಿ ಇಂತಹ ಮಕ್ಕಳು ಗುಟ್ಕಾವನ್ನು ಮನೋರಂಜನೆ ವಸ್ತುವಾಗಿ ಉಪಯೋಗಿಸುತ್ತಿರುವುದು ಶೋಚನೀಯ ಸಂಗತಿ.

ತಂಬಾಕು ಉತ್ಪಾದನಾ ಕಂಪನಿಗಳು ಸೋಶಿಯಲ್ ಮೀಡಿಯಾ ಪ್ಲಾಟ್ ಫಾರಂಗಳ ಮುಖಾಂತರ ಮಕ್ಕಳು ಮತ್ತು ಹದಿಹರೆಯದವರನ್ನು ತಂಬಾಕಿನತ್ತ ಸೆಳೆಯಲು ಪ್ರಯತ್ನಿಸುತ್ತಿವೆ. ತಂಬಾಕು ಉದ್ದಿಮೆದಾರರು ಲಾಭ ಗಳಿಸುವ ದುರಾಸೆಯಿಂದ ಆಕರ್ಷಕವಾದ ತಂಬಾಕು ಉತ್ಪನ್ನಗಳನ್ನು ಕೈಗೆಟಕುವ ಬೆಲೆಗೆ ಸುಲಭವಾಗಿ ದೊರೆಯುವತ್ತ ಲಕ್ಷ ಬೀರಿದ್ದಾರೆ. ಆದ್ದರಿಂದ ವಿಶ್ವ ತಂಬಾಕು ರಹಿತ ದಿನವಾದ ಇಂದು ವಿಶ್ವ ಸಂಸ್ಥೆಯು "ಮಕ್ಕಳನ್ನು ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ರಕ್ಷಿಸಿ" ಎನ್ನುವ ಘೋಷ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಸದಸ್ಯತ್ವ ದೇಶಗಳಿಗೆ ಪ್ರಸ್ತುತ ಮತ್ತು ಮುಂಬರುವ ಪೀಳಿಗೆಯನ್ನು ತಂಬಾಕಿನ ದುಶ್ಚಟಕ್ಕೆ ಬಲಿಯಾಗದಂತೆ ಜಾಗರೂಕರಾಗಿರಲು ಕರೆ ಕೊಟ್ಟಿದೆ.

ಡಾ|| ಉಷಾ.ಜಿ.ವಿ., ಡಾ|| ಸಂಗೀತ್ ಎಸ್.,
ಪ್ರಾಧ್ಯಾಪಕರು, ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ದಾವಣಗೆರೆ.

# ತಂಬಾಕು ಒಂದು ಮಾದಕ... ಆಗದಿರಲಿ ನಿಮಗಿದು ಮಾರಕ...

ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ, ಆದರೂ ಅದರ ಸೇವನೆ ಮಾಡುವವರ ಸಂಖ್ಯೆಗೇನೂ ಕಡಿಮೆ ಇಲ್ಲ. ತಂಬಾಕು ಉತ್ಪನ್ನಗಳ ಮೇಲೆ ಈ ವಾಕ್ಯವನ್ನು ಚಿತ್ರ ಸಹಿತ ನಮೂದಿಸಿದ್ದರೂ ಹಾಗೂ ಅದರಿಂದಾಗುವ ಪರಿಣಾಮಗಳ ಬಗ್ಗೆ ಅರಿವಿದ್ದರೂ ಮಕ್ಕಳು,ಯುವಕರು,ವಿದ್ಯಾವಂತರುಮತ್ತುಅವಿದ್ಯಾವಂತರೆನ್ನದೇ ಬಹುತೇಕ ಜನ ತಂಬಾಕು ಸೇವನೆ ಮಾಡುತ್ತಲೇ ಇರುವರು ಹಾಗೂ ಇದನ್ನು ದಿನನಿತ್ಯದ ಕಾಯಕವನ್ನಾಗಿಯೂ ಮಾಡಿಕೊಂಡಿರುವರು. ತಂಬಾಕು ಸೇವನೆಯಿಂದ ದಿನಂಪ್ರತಿ ಅನೇಕ ಸಾವು-ನೋವುಗಳು ಸಂಭವಿಸುತ್ತಲೇ ಇವೆ. ಈ ದಿಸೆಯಲ್ಲಿ ಧೂಮಪಾನ ಮಾಡುವುದರಿಂದ ಉಂಟಾಗುವ ತೊಂದರೆಗಳನ್ನು ಸಾರ್ವಜನಿಕರಿಗೆ ತಿಳಿಸುವ ಸಲುವಾಗಿ ಪ್ರತಿ ವರ್ಷ ಮೇ 31 ರಂದು 'ವಿಶ್ವ ತಂಬಾಕು ರಹಿತ ದಿನ' ವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಸದಸ್ಯ ರಾಷ್ಟ್ರಗಳು 1987 ರಲ್ಲಿ ಮೊಟ್ಟ ಮೊದಲ ಬಾರಿಗೆ ತಂಬಾಕು ರಹಿತ ದಿನದ ಆಚರಣೆಗೆ ಮುನ್ನುಡಿ ಬರೆದವು .

ಪ್ರತಿ ವರ್ಷ ವಿಶ್ವ ಆರೋಗ್ಯ ಸಂಸ್ಥೆ ಒಂದು ಥೀಮ್ ಅನ್ನು ಆಯ್ಕೆ ಮಾಡಿಕೊಂಡು ಅದರ ಹಿನ್ನೆಲೆಯಲ್ಲಿ ಈ ದಿನವನ್ನು ಆಚರಿಸುವುದು. 2024 ರ ವರ್ಷದ ವಿಶ್ವ ತಂಬಾಕು ರಹಿತ ದಿನದ ಆಚರಣೆಯ ಉದ್ದೇಶ "ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದಾಗಿದೆ " (protecting children from tobacco industry interference) ನಮ್ಮ ದೇಶದ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದನ್ನು 22 ಅಕ್ಟೋಬರ್ 2002 ರಿಂದ ನಿಷೇಧಿಸಲಾಗಿದ್ದು, ಅದರಂತೆ ಧೂಮಪಾನವನ್ನು ನಿಯಂತ್ರಿಸಲು ಭಾರತ ಸರ್ಕಾರ ಸಹಾಯವಾಣಿಯನ್ನು ಕೂಡ ಆರಂಭಿಸಿದೆ. ಚೀನಾ ಹೊರತು ಪಡಿಸಿದರೆ ಭಾರತದಲ್ಲಿ ಅತಿ ಹೆಚ್ಚು ಧೂಮಪಾನ ಮಾಡುವವರ ಸಂಖ್ಯೆ ಸರಿ ಸುಮಾರು 275 ಮಿಲಿಯನ್‌ನಷ್ಟಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ವಿಶ್ವದ ಧೂಮಪಾನಿಗಳಲ್ಲಿ ಭಾರತ ಪ್ರತಿಶತ 12 ರಷ್ಟನ್ನು ಹೊಂದಿದೆ. ತಂಬಾಕು ಸಂಬಂಧಿತ ಕಾಯಿಲೆಗಳಿಂದ ಪ್ರತಿವರ್ಷ ದೇಶವೊಂದರಲ್ಲಿ ಸುಮಾರು ಒಂದು ದಶಲಕ್ಷ ಜನ ಮರಣವನ್ನು ಹೊಂದುತ್ತಿರುವರು.

ಭಾರತದ ಎಲ್ಲಾ ನಗರಗಳ ಪೈಕಿ ಕೋಲ್ಕೊತ್ತಾ ನಗರದಲ್ಲಿ ಶೇಕಡಾ 56.6 ರಷ್ಟು ಜನ ಧೂಮಪಾನ ಮಾಡಿದರೆ, ಅದರಲ್ಲಿ ಶೇಕಡಾ 82ರಷ್ಟು ಪುರುಷರು ಮತ್ತು ಶೇಕಡಾ 23 ರಷ್ಟು ಮಹಿಳೆಯರಾಗಿದ್ದಾರೆ. ಅದರಂತೆ ಅತ್ಯಧಿಕವಾಗಿ ಬೀಡಿಯನ್ನು ಸೇವಿಸುವ ಜನರನ್ನುಹೊಂದಿರುವ ರಾಜ್ಯ ಉತ್ತರಾಖಂಡವಾಗಿದೆ.

ಕ್ಯಾನ್ಸರ್ ಸೊಸೈಟಿಯ ಪ್ರಕಾರ ಆಲ್ಕೋಹಾಲ್ ಸೇವನೆ, ಅಪಘಾತ, ಕೊಲೆ, ಆತ್ಮಹತ್ಯೆ, ಏಡ್ಸ್, ಡ್ರಗ್ಸ್‌ಗೆ ಒಳಗಾಗುವವರಿಗಿಂತಲೂ ಧೂಮಪಾನವನ್ನು ಯಾರು ಮಾಡುವರೋ ಅಂಥವರ ಸಾವಿನ ಸಂಖ್ಯೆಯಲ್ಲಿ ಹೆಚ್ಚಳವನ್ನು ಕಾಣಬಹು ದಾಗಿದೆ ಎಂದಿದೆ.

**ಧೂಮಪಾನದಿಂದ ಅಡ್ಡ ಪರಿಣಾಮಗಳು :**

- ವ್ಯಕ್ತಿಗತವಾಗಿ ಆರ್ಥಿಕ ಕುಸಿತ ಉಂಟಾಗುವುದು
- 14 ವರ್ಷದ ಒಳಗಿನ ಮಕ್ಕಳು ಧೂಮಪಾನ ಮಾಡುವುದರಿಂದ ಉಸಿರಾಟದ ತೊಂದರೆ ಹಾಗೂ ಲಂಗ್ಸ್ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಹಾಗೂ ದೇಹದಾರ್ಢ್ಯತೆ ಕಡಿಮೆಯಾಗುವುದು.
- ವ್ಯಕ್ತಿ ದಿನದಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚು ಸಿಗರೇಟು ಸೇದುವುದರಿಂದ ಆರೋಗ್ಯದಲ್ಲಿ ಇಳಿಕೆ ಕಂಡುಬರುವುದು, ಇದರಿಂದಾಗಿ ಎಲುಬುಗಳ ಬೆಳವಣಿಗೆಯೂ ಸಹ ಕುಂಠಿತಗೊಳ್ಳುವುದು.
- ಉಸಿರಾಟದ ತೊಂದರೆ ಉಂಟಾಗುವುದು.
- ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗುವುದು.
- ಶ್ವಾಸಕೋಶದ ಕ್ಯಾನ್ಸರ್ ಉಂಟಾಗುವುದು
- ದೃಷ್ಟಿಹೀನತೆ ಕಂಡುಬರುವುದು.
- ಕಿವುಡುತನ, ಅಸ್ತಮಾ, ಕಫ, ಶಕ್ತಿಹೀನತೆ ಮುಂತಾದ ಕಾಯಿಲೆಗಳು ಕಂಡುಬರುವುವು.
- ಸೆರೆಬ್ರೋವಾಸ್ಕುಲರ್ ಕಾಯಿಲೆ ಉಂಟಾಗುವುದು.
- ಹಲ್ಲುಗಳು ನಷ್ಟವಾಗುವುವು.
- ಪಾರ್ಶ್ವವಾಯು ಉಂಟಾಗುವುದು.
- ಬಾಯಿ ಮತ್ತು ಗಂಟಲು ಕ್ಯಾನ್ಸರ್ ಉಂಟಾಗುವುದು.
- ಕಿಡ್ನಿ ಮತ್ತು ಯಕೃತ್‌ಗೆ ತೊಂದರೆಯಾಗುವುದು.
- colon ಕ್ಯಾನ್ಸರ್ ಉಂಟಾಗುವುದು.

**ಸಾಮಾನ್ಯವಾಗಿ ಮಕ್ಕಳು ಮತ್ತು ಯುವಕರು ಧೂಮಪಾನಕ್ಕೆ ಒಳಗಾಗಲು ಮುಖ್ಯವಾದ ಕಾರಣಗಳೆಂದರೆ :**

- ಪೋಷಕರು ಮಕ್ಕಳಿಂದಲೇ ತಂಬಾಕು ಉತ್ಪನ್ನಗಳನ್ನು ತರಿಸಿಕೊಳ್ಳುವುದು
- ಕೆಟ್ಟ ಸ್ನೇಹಿತರ ಸಹವಾಸ,
- ಸಮೂಹ ಮಾಧ್ಯಮಗಳಲ್ಲಿ ಬಿತ್ತರವಾಗುವ ಆಕರ್ಷಕ ಜಾಹೀರಾತುಗಳು,
- ವಂಶವಾಹಿನಿ ಅಂಶಗಳು,
- ಅತಿಯಾದ ಒತ್ತಡ
- ಸ್ವಯಂ ಔಷಧಿಗಳನ್ನು ತೆಗೆದುಕೊಳ್ಳುತ್ತಿರುವುದು.

ಧೂಮಪಾನದಿಂದ ಉಂಟಾಗುವ ಅಡ್ಡ ಪರಿಣಾಮಗಳನ್ನು ತಡೆಗಟ್ಟಲು ಮೊದಲು ತಂಬಾಕು ಉತ್ಪನ್ನಗಳನ್ನು ಸರ್ಕಾರಗಳು ನಿಷೇಧಿಸಬೇಕು. ಹಾಗೊಮ್ಮೆ ಸಾರ್ವಜನಿಕ ಸ್ಥಳದಲ್ಲಿ ಸೇವನೆ ಮಾಡುವುದು ಮತ್ತು ಉಗುಳುವುದು ಮಾಡಿದಲ್ಲಿ ಹೆಚ್ಚಿನ ದಂಡ ವಸೂಲಿ ಮಾಡಬೇಕು. ಇದಲ್ಲದೆ ಪ್ರತಿಯೊಬ್ಬರೂ ನಮ್ಮ ಆರೋಗ್ಯದ ದೃಷ್ಟಿಯಿಂದ ಧೂಮಪಾನ ಮಾಡುವುದಿಲ್ಲವೆಂಬ ಶಪಥ ಮಾಡಬೇಕು, ಆಗ ಮಾತ್ರ ಧೂಮಪಾನ ರಹಿತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ. ನಾವುಗಳು ಕೇವಲ ಪ್ರತಿ ವರ್ಷ ಮೇ 31 ರಂದು ಮಾತ್ರ ತಂಬಾಕು ರಹಿತ ದಿನವನ್ನು ಆಚರಣೆ ಮಾಡಿದರೆ ಸಾಲದು, ಪ್ರತಿ ದಿನವೂ ತಂಬಾಕು ರಹಿತ ದಿನವನ್ನಾಗಿಸಬೇಕು.ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಯೋಚಿಸಿ ತಂಬಾಕು ಮುಕ್ತ ಸಮಾಜ ನಿರ್ಮಾಣದ ಕಡೆ ಹೆಜ್ಜೆ ಹಾಕಿ ದೇಶವನ್ನು ಮುನ್ನಡೆಸಲು ಪಣ ತೊಡಬೇಕು.

**ಒಬ್ಬ ಸಾಮಾನ್ಯ ಧೂಮಪಾನಿ ಉಳಿದವರಿಂದ 10 ವರ್ಷಗಳ ಮೊದಲೇ ಸಾಯುತ್ತಾನೆಂದು ಅಂಕಿ-ಅಂಶಗಳಿಂದ ತಿಳಿದು ಬಂದಿದೆ. ತಂಬಾಕು ಉತ್ಪನ್ನಗಳ ಸೇವೆನೆಯಿಂದ ಹತ್ತಾರು ಕಾಯಿಲೆಗಳು ಬರುತ್ತವೆ ಎಂಬ ಸತ್ಯದ ಅರಿವಿದ್ದೂ, ಜನರು ಅದಕ್ಕೆ ದಾಸರಾಗಿ ರೋಗಗಳನ್ನು ದಿನ ನಿತ್ಯ ಆಹ್ವಾನಿಸಿಕೊಳ್ಳುತ್ತಿರುವುದು ವೈದ್ಯ ಲೋಕಕ್ಕೆ ಜೀರ್ಣಿಸಿಕೊಳ್ಳಲಾಗದ ಸತ್ಯ. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ನಿಷೇಧ, ತಂಬಾಕು ಜಾಹೀರಾತು ನಿರ್ಬಂಧ, ಶಾಲೆಗಳ ಸುತ್ತ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧ ಇವೆಲ್ಲವನ್ನೂ ಸರ್ಕಾರಗಳು ಮಾಡಿದರೂ, ಜನರು ತಮ್ಮ ಇಚ್ಛಾಶಕ್ತಿಯನ್ನು ಬಳಸಿಕೊಂಡು, ತಮ್ಮ ಜವಾಬ್ದಾರಿ ಅರಿತು, ತಂಬಾಕು ಉತ್ಪನ್ನಗಳಿಂದ ದೂರ ಇರಬೇಕು. ಕಾನೂನಿನ ಶಿಕ್ಷೆಗೆ ಹೆದರಿ ಯಾರೂ ತಂಬಾಕು ಬಳಸದೇ ಇರಲಾರರು. ಈ ವಿಚಾರದಲ್ಲಿ ಜನರ ಪಾಲುದಾರಿಕೆ ಮತ್ತು ಪಾಲ್ಗೊಳ್ಳುವಿಕೆ ಅತೀ ಅಗತ್ಯ. ಹಾಗಾದಲ್ಲಿ ಮಾತ್ರ ಈ ವಿಶ್ವ ತಂಬಾಕು ರಹಿತ ದಿನ ಆಚರಣೆಗೆ ಹೆಚ್ಚು ಮೌಲ್ಯ ಬಂದೀತು.**




- ಡಾ. ಶಿವಯ್ಯ, ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.
s.shivaiah26@gmail.com

**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.**

ನಂ:ದಾಮಪಾ:ಕಾಅ3:ಇ.ಟೆಂಡರ್:03:2024–25
ದಿನಾಂಕ:30/05/2024

**ಟೆಂಡರ್ ಪ್ರಕಟಣೆ**

**ಕೆಪಿಪಿಪಿ ಪೋರ್ಟಲ್ ಮುಖಾಂತರ)**

ಪಾಲಿಕೆ ಸಾಮಾನ್ಯ ನಿಧಿ– 03 ಸಂಖ್ಯೆಯ ಕುಡಿಯುವ ನೀರಿಗೆ/ ಕಂಪ್ಯೂಟರ್ ದುರಸ್ತಿ ಸಂಭಂದಿಸಿದ ಕಾಮಗಾರಿ, ಪಾಲಿಕೆ ಸಾಮಾನ್ಯ ನಿಧಿ– 04 ಸಂಖ್ಯೆಯ (ಮರು ಟೆಂಡರ್) , 01 ಸಂಖ್ಯೆಯ ಕುಡಿಯುವ ನೀರಿಗೆ ಸಂಭಂದಿಸಿದ ಆರ್ ಒ ಪ್ಲ್ಯಾಂಟ್ ನಿರ್ವಹಣೆ ಕೆಲಸ ಕಾಮಗಾರಿ ಮತ್ತು 2021–22 ನೇ ಸಾಲಿನ 15ನೇ ಹಣಕಾಸು ಆಯೋಗದ Million Plus City ಮರು ಹಂಚಿಕೆ ಅನುದಾನ: ಕುಡಿಯುವ ನೀರಿನ ಕಾಮಗಾರಿ (ಮರು ಟೆಂಡರ್ 4 ನೇ ಕರೆ ), ಎಸ್ ಎಫ್.ಸಿ ವಿಶೇಷ ಅನುದಾನ ಒಂದು ಕಾಮಗಾರಿ ಮತ್ತು ಒಂದು 2020–21ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಗ್ರಾಂಟ್ (ಬದಲಿ ಕಾಮಗಾರಿ) ಕಾಗಾರಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂ. ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು. ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 14.06.2024 ಸಮಯ : 17.00 ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 15.06.2024 ಸಮಯ : 17.00 ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 17.06.2024.ಸಮಯ : 110.00 ನಂತರ ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 07.06.2024, ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 10.06.2024 ಸಮಯ 17.00 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 11.06.2024 .ಸಮಯ : 17.30 ನಂತರ

ವಾಸಾಇ/ದಾವಣಗೆರೆ/26/ ಕೆಎಸ್‌ಎಂಸಿಎ/2024–25

**ಸಹಿ/–ಕಾರ್ಯಪಾಲಕ ಅಭಿಯಂತರರು(ವಿ)
ಮಹಾನಗರ ಪಾಲಿಕೆ, ದಾವಣಗೆರೆ**

## ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣ :

# ಸಂಪುಟದಿಂದ ನಾಗೇಂದ್ರ ವಜಾಗೆ ಅಶೋಕ್ ಒತ್ತಾಯ

ಬೆಂಗಳೂರು, ಮೇ 30 - ದಲಿತರ ಹಣ ನುಂಗಿರುವ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ವಜಾ ಮಾಡಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ.ಗಳನ್ನು ಸರ್ಕಾರವೇ ನುಂಗಿ ನೀರು ಕುಡಿದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇದಕ್ಕೆ ನೇರ ಹೊಣೆ. ಇಲಾಖಾ ಸಚಿವ ನಾಗೇಂದ್ರ ಅವರನ್ನು ಜೂನ್ 6ರೊಳಗೆ ಸಂಪುಟದಿಂದ ವಜಾಗೊಳಿಸದಿದ್ದರೆ ಇಡೀ ರಾಜ್ಯಾದ್ಯಂತ ಬಿಜೆಪಿ ಉಗ್ರ ಹೋರಾಟ ನಡೆಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವರು ರಾಜೀನಾಮೆ ನೀಡುವ ವರೆಗೂ ನಾವು ವಿಶ್ರಮಿಸುವುದಿಲ್ಲ, ಅಷ್ಟೇ ಅಲ್ಲ, ಹಗರಣದಲ್ಲಿ ಪಾಲುದಾರರಾಗಿರುವ ಅಧಿಕಾರಿಗಳನ್ನು ತಕ್ಷಣವೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಮುಚ್ಚಿ ಹಾಕಲೆಂದೇ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ಸಿಐಡಿ ಎಂದರೆ, ಕಾಂಗ್ರೆಸ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್. ಇದರಿಂದ ಯಾವುದೇ ನ್ಯಾಯ ದೊರಕದು ಎಂದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಚುನಾವಣಾ ಭಾಷಣದಲ್ಲಿ ಮಾತನಾಡಿ, ತಮ್ಮ ಸರ್ಕಾರ ಬಂದ ಬಳಿಕ ಮಹಿಳೆಯರ ಬ್ಯಾಂಕ್ ಖಾತೆಗೆ ಟಕಾ.., ಟಕ್, ಟಕಾ.., ಟಕ್ ಹಣ ಹಾಕುವುದಾಗಿ ಹೇಳಿದ್ದರು. ಅವರ ಮಾತನ್ನು ಅನುಸರಿಸಿದ ರಾಜ್ಯ ಕಾಂಗ್ರೆಸ್‌ನ ಎಲ್ಲ ಸಚಿವರು, ಟಕ್.., ಟಕಾ.., ಟಕ್ ಎಂಬಂತೆ ಹಣ ವರ್ಗಾವಣೆ ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ನಾಲ್ಕರಂದು 25 ಕೋಟಿ ಟಕಾ.., ಟಕ್ ವರ್ಗಾವಣೆ, 6ರಂದು 25 ಕೋಟಿ ಟಕಾ.., ಟಕ್ ವರ್ಗಾವಣೆ, 21ರಂದು 44 ಕೋಟಿ ಟಕಾ.., ಟಕ್ ವರ್ಗಾವಣೆ, ರಾಜ್ಯ ಖಜಾನೆಯಿಂದ 43 ಕೋಟಿ ಟಕಾ.., ಟಕ್ ವರ್ಗಾವಣೆ, ಮತ್ತೆ 21ರಂದು 50 ಕೋಟಿ ಟಕಾ.., ಟಕ್ ಟ್ರಾನ್ಸ್‌ಫರ್ ಆಗಿದೆ. ಕಾಂಗ್ರೆಸ್ಸಿನವರು ಇಷ್ಟು ಮೊತ್ತವನ್ನು ಅವರ ಲೂಟಿ ಖಾತೆಗೆ ಹಾಕಿದ್ದಾರೆ, ಇದೊಂದು ಬ್ರಹ್ಮಾಂಡ ಭ್ರಷ್ಟಾಚಾರ ಎಂದು ಆರೋಪಿಸಿದರು.

187 ಕೋಟಿ ರೂ. ನುಂಗಲು ಒಬ್ಬ ಮಂತ್ರಿಯಿಂದ ಸಾಧ್ಯವಿಲ್ಲ, ಇದು ಸಣ್ಣ ಮೊತ್ತವೇನಲ್ಲ, ಅವರ ಜೀವನ, ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಸಂತೃಪ್ತಿಯಿಂದ ಬದುಕುವಷ್ಟು ದುಡ್ಡು ಇದು ಎಂದರು.

ರಾಹುಲ್ ಗಾಂಧಿ ಹೇಳಿದಂತೆ 25 ಸಾವಿರ ಕೋಟಿ ರೂ. ದಲಿತರ ಹಣ ಮಾಯವಾಗಿದೆ, ಎಲ್ಲಿಗೆ ಹೋಯಿತು, ಯಾರಿಗೆ ಹೋಯಿತೆಂದು ಗೊತ್ತಿಲ್ಲ. ಯಾವುದಕ್ಕೆ ಬಳಸಿದರೆಂದೂ ಗೊತ್ತಿಲ್ಲ, ಇವತ್ತು ಅಧಿಕಾರಿಗಳು ಟಕಾ.., ಟಕ್ ಎಂದು ಸತ್ತು ಹೋಗುತ್ತಿದ್ದಾರೆ. ಬಿತ್ತನೆ ಬೀಜದ ಬೆಲೆ ಶೇ. 70 ರಷ್ಟು ಟಕಾ.., ಟಕ್ ಏರಿಕೆಯಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್ಸಿನವರಿಗೆ ರಾಮನ ಕಂಡರೆ ಆಗುವುದಿಲ್ಲ, ವಾಲ್ಮೀಕಿ ಮಹರ್ಷಿ ಕಂಡರೆ ಆಗೋಲ್ಲ ಆದರೆ, ವಾಲ್ಮೀಕಿ ನಿಗಮದ ಹೆಸರಿನಲ್ಲಿ ಇದ್ದ 187 ಕೋಟಿ ರೂ. ಎಗರಿಸಿದ್ದು ಬ್ರಹ್ಮಾಂಡ ಭ್ರಷ್ಟಾಚಾರ, ಕಾಂಗ್ರೆಸ್ಸಿನ ಒಂದು ವರ್ಷದ ಸಾಧನೆ ಎಂದು ಟೀಕಿಸಿದರು.

### ಸಚಿವ ನಾಗೇಂದ್ರಗೆ ಸಮನ್ಸ್ : ಡಿಕೆಶಿ

ಬೆಂಗಳೂರು, ಮೇ 30 – ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಸಚಿವ ಬಿ. ನಾಗೇಂದ್ರ ಅವರಿಗೆ ಸಮನ್ಸ್ ಕಳಿಸಿ ವಿವರಣೆ ಕೇಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಈ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಭೀರವಾಗಿ ಪರಿಶೀಲಿಸುತ್ತಿದ್ದಾರೆ ಹಾಗೂ ಅಧಿಕಾರಿಗಳಿಂದ ವಿಸ್ತೃತ ವರದಿ ಕೇಳಿದ್ದಾರೆ ಎಂದೂ ಶಿವಕುಮಾರ್ ತಿಳಿಸಿದ್ದಾರೆ.

### ಶಾಲೆ...

ತೆರೆದಿದೆ ಶಾಲೆ ಬಾ ಓ ಮಗುವೆ
ನಿನ್ನ ಬಾಲ್ಯಕೆ ಅದೇ ಜಗವೆ
ಅಕ್ಷರ ಕಲಿಸುವ ಆರಾಧ್ಯವೇ ನಿನ್ನ ಗುರುವೆ
ಜ್ಞಾನವ ಪಡೆದರೆ ನೀನಾಗುವೆ ಈ ಜಗಕೆ ದೀಪವೇ

ಆಟದಿಂದ ಪಾಠವ ಕಲಿಸುವ ಶಾಲೆ
ಭೇದ ಭಾವವ ಸುಡುವ ಜ್ವಾಲೆ
ಕಲಿಸುವುದು ಜೀವನದಿ ಬಕುದುವ ಕಲೆ
ಕಲ್ಪಿಸುವುದು ಜೀವನಕ್ಕೆ ಒಂದು ನೆಲೆ

ಅನ್ನ, ಬಟ್ಟೆ, ಪುಸ್ತಕ, ಎಲ್ಲಾ ಉಚಿತ
ಗುಣಮಟ್ಟದ ಶಿಕ್ಷಣ ದೊರೆಯುವುದು ಖಚಿತ
ನೀ ಬಾ ಶಾಲೆಗೆ ನಗು ನಗುತ
ಜ್ಞಾನದ ದೇಗುಲಕ್ಕೆ ಹಂಬಲಿಸುತ

ಯಾರು ಕದಿಯಲಾಗದ ಜ್ಞಾನ
ಮಾಡುತ್ತಾ ಸಂಪಾದಿಸು ಧ್ಯಾನ

**- ಬಸವರಾಜ ಕರುವಿನ,** ಬಸವನಾಳು

### ಹೆಮ್ಮನಬೇತೂರಿನಲ್ಲಿ ಇಂದು ಬಸವ ಜಯಂತ್ಯೋತ್ಸವ

ದಾವಣಗೆರೆ ತಾಲ್ಲೂಕು ಹೆಮ್ಮನಬೇತೂರಿನ ಶ್ರೀ ಸಿದ್ಧೇಶ್ವರ ಪ್ರೌಢಶಾಲಾ ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಹಾಗೂ ದಾವಣಗೆರೆ ತಾಲ್ಲೂಕು ಘಟಕದ ಆಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಬಸವ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಹೆಮ್ಮನಬೇತೂರು ಗ್ರಾ.ಪಂ. ಅಧ್ಯಕ್ಷರಾದ ಪವಿತ್ರ ಕರಿಯಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಬಿ. ರುದ್ರಗೌಡ ಗೋಪನಾಳು ಅಧ್ಯಕ್ಷತೆ ವಹಿಸಲಿದ್ದಾರೆ. ಎಸ್.ಎಂ. ಕೃಷ್ಣ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಕೆ.ಎಸ್. ಗಂಗಾಧರ್ 'ಸಾಂಸ್ಕೃತಿಕ ನಾಯಕರು ಬಸವಣ್ಣನವರು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಸಿದ್ದೇಶ್ವರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಕುಸುಮಾ ಎನ್. ಇಂಗಳಕಿ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಆವರಗೆರೆ ರುದ್ರಮುನಿ, ಶಸಾಪ ತಾಲ್ಲೂಕು ಘಟಕದ ಗೌರವಾಧ್ಯಕ್ಷ ಹೆಚ್.ಆರ್. ಲಿಂಗರಾಜ್, ಸದಸ್ಯ ಶಶಿಧರ ಹೆಚ್. ಬಸಾಪುರ ಮತ್ತಿತರರು ಭಾಗವಹಿಸಲಿದ್ದಾರೆ.

### ಮೇಲ್ಮನೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಡಿಬಿ ಹೆಸರು ಮುಂಚೂಣಿಯಲ್ಲಿ



ದಾವಣಗೆರೆ, ಮೇ 30 - ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಶತಕ ದಾಟಿದ್ದ ಆಕಾಂಕ್ಷಿಗಳ ಪಟ್ಟಿ ಬುಧವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರುಗಳೊಂದಿಗೆ ಚರ್ಚಿಸಿ ಶಾರ್ಟ್ ಲಿಸ್ಟ್ ಅಂತಿಮ ಹಂತಕ್ಕೆ ಬಂದಿದ್ದು, ಪರಿಶಿಷ್ಟ ಜಾತಿಯ ಖೋಟಾದಡಿ ಭೋವಿ ಸಮುದಾಯದ ಡಿ. ಬಸವರಾಜ್ ಹೆಸರು ಮುಂಚೂಣಿಯಲ್ಲಿದೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ಡಿ. ಬಸವರಾಜ್ ಅವರು ಕಳೆದ ನಾಲ್ಕು ದಶಕಗಳಿಂದ ವಿದ್ಯಾರ್ಥಿ ಕಾಂಗ್ರೆಸ್‌ನಿಂದ ಬಂದವರು. ಯುವಕ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ ಸೇರಿದಂತೆ ಕೆಪಿಸಿಸಿ ಚುನಾಯಿತ ಸದಸ್ಯರಾಗಿ, ಕೆಪಿಸಿಸಿ ಕಾರ್ಯದರ್ಶಿಯಾಗಿ, ಪ್ರಸ್ತುತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಡಿ. ಬಸವರಾಜ್ ಎಂಎಲ್ಎ ಹಾಗೂ ಎಂಪಿ ಟಿಕೆಟ್‌ಗಾಗಿ ಪ್ರಯತ್ನ ಪಟ್ಟಿದ್ದರು. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಬಸವರಾಜ್ ಅವರಿಗೆ ಸೂಕ್ತ ಸ್ಥಾನಮಾನ ಸಿಕ್ಕಿಲ್ಲ. ಈ ಬಾರಿ ಎಂಎಲ್‌ಸಿ ಟಿಕೆಟ್ ಸಿಗುವ ಸಂಭವ ಇದೆ ಎಂದು ತಿಳಿದು ಬಂದಿದೆ.

### ನಗರದಲ್ಲಿ ಇಂದು ವಿಶ್ವ ತಂಬಾಕು ರಹಿತ ದಿನ

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ 'ವಿಶ್ವ ತಂಬಾಕು ರಹಿತ ದಿನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್.ಹೆಗಡೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಪಾಲಿಕೆ ಆಯುಕ್ತರಾದ ರೇಣುಕ ಅಧ್ಯಕ್ಷತೆ ವಹಿಸುವರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಕಾರ್ಯಕ್ರಮ ಅಧಿಕಾರಿ ಡಾ.ಜಿ. ಡಿ.ರಾಘವನ್ ಪ್ರಾಸ್ತಾವಿಕ ನುಡಿಗಳಾನ್ನಾಡುವರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ಭಿತ್ತಿಪತ್ರ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಅಪರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ನೋಡಲ್ ಅಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್. ಬಳ್ಳಾರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸದಸ್ಯ ಕಾರ್ಯದರ್ಶಿ ಡಾ.ಷಣ್ಮುಖಪ್ಪ ಮತ್ತಿತರರು ಭಾಗವಹಿಸುವರು.

# ಕವಿಗಳ ಸಂಖ್ಯೆ ಕ್ಷೀಣಿಸಿದರೆ, ಮನೋರೋಗಿಗಳು ಹೆಚ್ಚಳ

## 'ಪ್ರತಿಭೆ ಮತ್ತು ಕಲಾಭಿವ್ಯಕ್ತಿ' ವಿಷಯ ಕುರಿತು ಡಾ. ಮಹಾಂತೇಶ್ ಪಾಟೀಲ್ ಉಪನ್ಯಾಸ



ದಾವಣಗೆರೆ, ಮೇ 30- ಸಮಾಜದಲ್ಲಿ ಕವಿಗಳ ಸಂಖ್ಯೆ ಕಡಿಮೆಯಾದರೆ, ಮನೋರೋಗಿಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ದಾವಣಗೆರೆ ವಿವಿಯ ಕನ್ನಡ ಅಧ್ಯಯನ ವಿಭಾಗದ ಡಾ. ಮಹಾಂತೇಶ್ ಪಾಟೀಲ್ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ 'ಭಿತ್ತಿಚಿತ್ರ ಕಲಾ ಶಿಬಿರ'ದಲ್ಲಿ ಗುರುವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಪ್ರತಿಭೆ ಮತ್ತು ಕಲಾಭಿವ್ಯಕ್ತಿ' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಒಬ್ಬ ವ್ಯಕ್ತಿಯ ವಿಶಿಷ್ಟ ಶಕ್ತಿಯೇ ಪ್ರತಿಭೆ ಆಗಿದೆ. ಕವಿ ಮತ್ತು ಕಲಾವಿದರಲ್ಲಿನ ಪ್ರತಿಭೆ ಸಾಮಾನ್ಯ ಪ್ರತಿಭೆಗಿಂತ ವಿಶೇಷವಾದುದು ಎಂದು ಹೇಳಿದರು.

ಇಂದಿನ ದಿನಮಾನಗಳಲ್ಲಿ ಸಾಹಿತ್ಯ ಮತ್ತು ಕಲೆಗಿರುವ ಬೇಡಿಕೆ ಕ್ಷೀಣಿಸುತ್ತಿದ್ದು, ಇವುಗಳ ಬಗ್ಗೆ ಜನರಲ್ಲಿ ಅಜ್ಞಾನದ ಚಟುವಟಿಕೆ ಹೆಚ್ಚಾಗಿದೆ ಎಂದು ಬೇಸರ ವ್ಯಕ್ತ ಪಡಿಸಿದರು.

ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಮಾನಸಿಕ ಸ್ಥಿತಿ ಉತ್ತಮವಾಗಿಸುವ ನಿಟ್ಟಿನಲ್ಲಿ ಕಲೆ ಹಾಗೂ ಕಾವ್ಯದ ಅಭ್ಯಾಸವನ್ನು ಶಿಕ್ಷಣದಲ್ಲಿ ಕಡ್ಡಾಯಗೊಳಿಸಿದ್ದಾರೆ ಎಂದರು.

ಸಾಹಿತ್ಯಕ್ಕೆ ಮನ ಪರಿವರ್ತನೆ ಮಾಡುವ ವಿಶೇಷ ಗುಣವಿದೆ. ಆದರೆ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಜೋತುಬಿದ್ದ ಮಕ್ಕಳು, ಭಾವನೆ ಮತ್ತು ಮಾನವೀಯತೆ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಸಮಾಜದಲ್ಲಿ ಅಹಿತಕರ ಘಟನೆ ನಡೆಯುತ್ತಿವೆ ಎಂದರು.

ಸಮಾಜದಲ್ಲಿ ಉತ್ತಮ ಆಲೋಚನೆ ಹಾಗೂ ಸ್ವಾಸ್ಥ್ಯ ಮನಸ್ಥಿತಿಯಿಂದ ಬದುಕಲು ಕಲಾ ಮತ್ತು ಸಾಹಿತ್ಯ ಬಹುಮುಖ್ಯವಾಗಿದೆ, ಇದನ್ನೇ ನಿರಾಕರಿಸಿದರೆ ಮನುಷ್ಯ ಕ್ರೂರಿ ಆಗುತ್ತಾನೆ ಎಂದು ಹೇಳಿದರು.

ಎ.ವಿ.ಕೆ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ರಣಧೀರ ಮಾತನಾಡಿ, ಕವಿ ತನ್ನ ಕಾವ್ಯದ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡಿದರೆ, ದೃಶ್ಯಕಲಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಮೂಲಕ ಸಮಾಜ ಸುಧಾರಿಸಬೇಕು ಎಂದು ಹೇಳಿದರು.

ಯುವಕರು ಹೃದಯವಂತಿಕೆ ಜತೆಗೆ ಅನ್ಯಾಯ ಕಂಡರೆ ಪ್ರತಿಭಟಿಸುವ ಗುಣ ರೂಢಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಯುವಕರನ್ನು ಪ್ರಜ್ಞಾವಂತರನ್ನಾಗಿಸುವ ಸಾಮರ್ಥ್ಯ ಎನ್ನೆಸ್ಸೆಸ್ ಶಿಬಿರಕ್ಕಿದೆ ಎಂದು ತಿಳಿಸಿದರು.

ಈ ವೇಳೆ ಕಾಲೇಜಿನ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಶಿಬಿರಾಧಿಕಾರಿ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ಸಹ ಶಿಬಿರಾರ್ಥಿ ಡಾ.ಎಂ.ಕೆ. ಗಿರೀಶ್ ಕುಮಾರ್, ಬೋಧನಾ ಸಹಾಯಕರಾದ ಡಾ. ಸಂತೋಷ ಕುಮಾರ್ ಕುಲಕರ್ಣಿ, ದತ್ತಾತ್ರೇಯ ಎನ್. ಭಟ್, ಅರುಣ್, ನವೀನ್ ಹಾಗೂ ವಿದ್ಯಾರ್ಥಿಗಳು ಇದ್ದರು.

ಶಾರದಾ ಪ್ರಾರ್ಥನೆ ಮಾಡಿದರು. ಶಂಕರಪ್ಪ ಸ್ವಾಗತಿಸಿದರು.

**ಕವಿಗಳ ಸಾಧನೆಗೆ ಸಿಗುವ ಗೌರವ, ಚಿತ್ರ ಕಲಾವಿದರ ಸಾಧನೆಗೆ ಸಿಗದಿರುವುದು ಶೋಚನಿಯವಾಗಿದೆ.**
**- ಡಾ. ಮಹಾಂತೇಶ ಪಾಟೀಲ್**

### ನಗರದ ದೃಶ್ಯಕಲಾ ಕಾಲೇಜಿನಲ್ಲಿ ಇಂದು ಭಿತ್ತಿಚಿತ್ರ ಶಿಬಿರ

ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ 7 ದಿನಗಳ ಭಿತ್ತಿಚಿತ್ರ ಕಲಾ ಶಿಬಿರದಲ್ಲಿ ಇಂದು ಮುಂಜಾನೆ 6.30ಕ್ಕೆ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಎಸ್. ಹೆಚ್. ಹರೀಶ್ ಅವರು ಧ್ವಜಾರೋಹಣ ನೆರವೇರಿಸುವರು.

ಸಂಜೆ 5.30ರ ಕಾರ್ಯಕ್ರಮದಲ್ಲಿ 'ಪ್ರತಿಭೆ ಮತ್ತು ಕಲಾಭಿವ್ಯಕ್ತಿ' ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಮಹಾಂತೇಶ್ ಪಾಟೀಲ ಅವರು ಉಪನ್ಯಾಸ ನೀಡುವರು. ಚಿತ್ರ ಕಲಾವಿದ ಚಂದ್ರಶೇಖರ ಸಂಗಾ ಅವರು ಮುಖ್ಯ ಅತಿಥಿಯಾಗಿದ್ದಾರೆ.

# ಮೌಲ್ಯಾಧರಿತ ಶಿಕ್ಷಣ ನಮ್ಮ ಗುರಿ

## ಪೊಲೀಸ್ ಚಿಣ್ಣರ ಅಂಗಳ ಶಾಲೆ ಉದ್ಘಾಟಸಿದ ಎಸ್ಪಿ ಉಮಾ



ದಾವಣಗೆರೆ, ಮೇ 30- ಪೊಲೀಸ್ ಸಿಬ್ಬಂದಿ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ, ಗುಣಮಟ್ಟದ ಹಾಗೂ ಮೌಲ್ಯಾಧರಿತ ಶಿಕ್ಷಣ ನೀಡುವುದೇ 'ಚಿಣ್ಣರ ಅಂಗಳ' ಶಾಲೆಯ ಮುಖ್ಯ ಗುರಿಯಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಹೇಳಿದರು.

ನಗರದ ಪೊಲೀಸ್ ಕ್ವಾರ್ಟಸ್‌ನಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಇಂದು ಏರ್ಪಾಡಾಗಿದ್ದ ಪೊಲೀಸ್ ಚಿಣ್ಣರ ಅಂಗಳ ಶಾಲೆ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಇದ್ದ ಶಾಲೆಯನ್ನು ಸ್ಥಳಾಂತರ ಮಾಡಿ ಪುನರುಜ್ಜೀವನಗೊಳಿಸಲಾಗಿದೆ. ಪೊಲೀಸ್ ಸಿಬ್ಬಂದಿ ಮಕ್ಕಳಿಗೆ ಪ್ರವೇಶದಲ್ಲಿ ಮೊದಲ ಆದ್ಯತೆ ಇದ್ದು, ಪೊಲೀಸ್ ಸಿಬ್ಬಂದಿ ಮಕ್ಕಳಿಗೆ ಸೀಟು ಹಂಚಿಕೆಯಾಗಿ ಇನ್ನೂ ಉಳಿದರೇ ಸಾರ್ವಜನಿಕರ ಮಕ್ಕಳಿಗೂ ಪ್ರವೇಶಾವಕಾಶ ಕಲ್ಪಿಸಿಕೊಡಲಾಗುವುದು ಎಂದರು.

ಪೊಲೀಸ್ ಸಿಬ್ಬಂದಿ ಮಕ್ಕಳಿಗೆ ಗುಣಮಟ್ಟದ ಮತ್ತು ಮೌಲ್ಯಾಧರಿತ ಶಿಕ್ಷಣ ನೀಡುವ ಉದ್ದೇಶದಿಂದಲೇ ಕರ್ನಾಟಕ ಪೊಲೀಸ್ ಕಲ್ಯಾಣ ಮತ್ತು ಶಿಕ್ಷಣ ಟ್ರಸ್ಟ್ ವತಿಯಿಂದ ಕೊಂಡಜ್ಜಿಯಲ್ಲಿ ಪೊಲೀಸ್ ಪಬ್ಲಿಕ್ ಸ್ಕೂಲ್ ತೆರೆದಿದ್ದು, ಅದೇ ಮಾದರಿಯಲ್ಲಿಯೇ ದಾವಣಗೆರೆ ನಗರದಲ್ಲಿ ಚಿಣ್ಣರ ಅಂಗಳ ಶಾಲೆಯನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದರು.

ಈಗಾಗಲೇ ಮೂವತ್ತು ಮಕ್ಕಳು ಪ್ರವೇಶ ಪಡೆದಿದ್ದಾರೆ. ಜೂ. 3 ರಿಂದ ಅಧಿಕೃತವಾಗಿ ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ಆರಂಭಗೊಳ್ಳಿವೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪ್ರೀ ಸ್ಕೂಲ್, ಎಲ್‌ಕೆಜಿ ಮತ್ತು ಯುಕೆಜಿ ಪ್ರಾರಂಭಿಸಲಾಗಿದೆ. ಮಕ್ಕಳಿಗೆ ಆಟಗಳ ಮೂಲಕ ಪಾಠವನ್ನು ಕಲಿಸಲಾಗುವುದು. ಮಕ್ಕಳಲ್ಲಿ ಕ್ರಿಯಾಶೀಲತೆ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು.

ಇದಕ್ಕೂ ಮುನ್ನ ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಡಾ. ಕೆ. ತ್ಯಾಗರಾಜನ್ ಹಾಗೂ ಶ್ರೀಮತಿ ಸಂಗೀತಾ ತ್ಯಾಗರಾಜನ್ ಚಿಣ್ಣರ ಅಂಗಳ ಶಾಲೆಯನ್ನು ಉದ್ಘಾಟಿಸಿದರು.

ಇದೇ ವೇಳೆ ಸಂಗೀತಾ ತ್ಯಾಗರಾಜನ್ ಹಾಗೂ ಎಸ್ಪಿ ಉಮಾ ಪ್ರಶಾಂತ್ ಅವರನ್ನು ಗೌರವಿಸಲಾಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ವಿಜಯ ಕುಮಾರ್ ಎಂ. ಸಂತೋಷ್, ಜಿ. ಮಂಜುನಾಥ್, ಅಧಿಕಾರಿಗಳಾದ ಸೋಮಶೇಖರ್, ಪ್ರಶಾಂತ್ ಸಿದ್ಧನಗೌಡ, ಯತೀಶ್, ಪಲ್ಲವಿ ಪತ್ತಾರ್ ಮತ್ತಿತರರು ಉಪಸ್ಥಿತರಿದ್ದರು.

# ಅಗ್ನಿಬಾನ್ ರಾಕೆಟ್ ಪರೀಕ್ಷೆ ಯಶಸ್ವಿ

**(1ನೇ ಪುಟದಿಂದ)** ಮೊದಲ 3ಡಿ ಮುದ್ರಣ ತಂತ್ರಜ್ಞಾನದ ಸೆಮಿ ಕ್ರಯೋಜನಿಕ್ ಇಂಜಿನ್ ಆಗಿದೆ. ಇದು ದೇಶೀಯ ವಿನ್ಯಾಸ ಹಾಗೂ ಆವಿಷ್ಕಾರದ ಸಾಧನೆಯೂ ಆಗಿದೆ. ಇದರಿಂದ ಬಾಹ್ಯಾಕಾಶ ನವೋದ್ಯಮ ಕಂಪನಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಆವಿಷ್ಕಾರಕ್ಕೆ ಬೆಂಬಲ ನೀಡಲು ಇಸ್ರೋಗೆ ಸ್ಫೂರ್ತಿ ದೊರೆತಿದೆ ಎಂದವರು ಹೇಳಿದ್ದಾರೆ.

ಅಗ್ನಿಬಾಣದ ಯಶಸ್ಸು ಭಾರತದ ಬಾಹ್ಯಾಕಾಶ ವಲಯದಲ್ಲಿ ಐತಿಹಾಸಿಕ ಕ್ಷಣವಾಗಿದೆ ಎಂದು ಬಾಹ್ಯಾಕಾಶ ನಿಯಂತ್ರಕ ಇನ್ - ಸ್ಪೇಸ್ ಅಧ್ಯಕ್ಷ ಪವನ್ ಗೋಯಂಕ ಹೇಳಿದ್ದಾರೆ.

ಮಾರ್ಚ್ 22ರ ನಂತರ ರಾಕೆಟ್ ಅನ್ನು ನಾಲ್ಕು ಬಾರಿ ಪರೀಕ್ಷೆಗೆ ಒಳಪಡಿಸಲು ಪ್ರಯತ್ನಿಸಲಾಗಿತ್ತು. ಮಾರ್ಚ್ 22, ಏಪ್ರಿಲ್ 6, ಏಪ್ರಿಲ್ 7 ಹಾಗೂ ಮೇ 28ರಂದು ನಡೆಸಲು ಉದ್ದೇಶಿಸಿದ್ದ ಪರೀಕ್ಷೆಗಳನ್ನು ತಾಂತ್ರಿಕ ಕಾರಣಗಳಿಂದ ಕೈ ಬಿಡಲಾಗಿತ್ತು.

ಈ ತಂತ್ರಜ್ಞಾನದ ಮೂಲಕ ಅತ್ಯಂತ ವೇಗವಾಗಿ ರಾಕೆಟ್ ಜೋಡಣೆ ಮಾಡಬಹುದು. ಇದು ವಿಶ್ವದ ಮೊದಲ 3ಡಿ ಒಂದೇ ಬಿಡಿ ಭಾಗದ ರಾಕೆಟ್ ಇಂಜಿನ್ ಹೊಂದಿದೆ ಎಂದು ಐ.ಐ.ಟಿ. ಮದ್ರಾಸ್‌ನ ಎನ್.ಸಿ.ಸಿ. ಆರ್.ಡಿ. ಮುಖ್ಯಸ್ಥರೂ ಆಗಿರುವ ಅಗ್ನಿಕುಲ್ ಕಾಸ್ಮೋಸ್ ಸ್ಥಾಪಕ ಸಲಹೆಗಾರ ಆರ್. ಚಕ್ರವರ್ತಿ ಹೇಳಿದ್ದಾರೆ.

ಅಗ್ನಿಕುಲ್ ತಂಡ 200ಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ಹೊಂದಿದೆ. ಇವರ ಜೊತೆ ಐಐಟಿ ಮದ್ರಾಸ್‌ನ ಎನ್.ಸಿ.ಸಿ.ಆರ್.ಡಿ. ಕೈ ಜೊಡಿಸಿದೆ. ಇಸ್ರೋದ 45 ವಿಜ್ಞಾನಿಗಳು ಮಾರ್ಗದರ್ಶನ ನೀಡಿದ್ದರು.

ಅಗ್ನಿಬಾನ್ ಎರಡು ಹಂತದ ರಾಕೆಟ್ ಆಗಿದೆ. ಇದು 300 ಕೆಜಿ ತೂಕದ ಭಾರವನ್ನು 700 ಕಿ.ಮೀ. ಕಕ್ಷೆಗೆ ಸಾಗಿಸಬಲ್ಲದು ಎಂದು ಕಂಪನಿ ತಿಳಿಸಿದೆ.

# ನಿರ್ವಹಣೆ ಇಲ್ಲದ ಶುದ್ಧ ನೀರಿನ ಘಟಕ

## ಅಧಿಕಾರಿಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ತರಾಟೆ



ದಾವಣಗೆರೆ, ಮೇ 30 - ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ದಿಂಡದಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ, ಮೂರು ತಿಂಗಳು ಕಳೆದರೂ ಗ್ರಾಮಸ್ಥರಿಗೆ ಒಂದು ಹನಿ ನೀರು ವಿತರಿಸಿಲ್ಲ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಗುತ್ತಿಗೆದಾರರು ಮತ್ತು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ತಾಲ್ಲೂಕಿನ ದಿಂಡದಹಳ್ಳಿ ಗ್ರಾಮಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ, ಮೂರು ತಿಂಗಳು ಕಳೆದರೂ ಒಂದು ಹನಿ ನೀರು ವಿತರಿಸಿಲ್ಲ. ಶುದ್ಧ ನೀರು ಸಿಗದೇ ಗ್ರಾಮಸ್ಥರು ವಿವಿಧ ರೋಗಗಳಿಗೆ ತುತ್ತಾಗಬೇಕಾಗಿದೆ ಎಂದು ಗ್ರಾಮಸ್ಥರು ಶಾಸಕರ ಬಳಿ ಅಳಲು ತೋಡಿಕೊಂಡರು.

ಸಂಬಂಧಪಟ್ಟ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಈಗಾಗಲೇ ಅನುದಾನ ಬಿಡುಗಡೆಯಾಗಿದೆ. ಆದರೂ ಕೂಡ ಗ್ರಾಮಸ್ಥರಿಗೆ ನೀರು ವಿತರಿಸಲು ಆಗಿಲ್ಲ. ಇದೇ ರೀತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಇಂತಹ ಅನೇಕ ಘಟಕಗಳು ನಿರ್ವಹಣೆ ಇಲ್ಲದೇ ಸ್ಥಗಿತಗೊಂಡಿರುವ ಬಗ್ಗೆ ಜನರಿಂದ ದೂರುಗಳು ಬರುತ್ತಿವೆ. ಕೂಡಲೇ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ವಿತರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ವಿತರಿಸಬೇಕೆಂಬ ಉದ್ದೇಶದಿಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಲಕ್ಷಾಂತರ ರೂ. ವೆಚ್ಚ ಮಾಡಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಘಟಕಕ್ಕೆ ತಗಲುವ ಅನುದಾನವು ಬಿಡುಗಡೆಯಾಗಿದೆ. ಹೀಗಿದ್ದರೂ ನೀರಿನ ಘಟಕಗಳು ಸರಿಯಾಗಿ ನಿರ್ವಹಣೆ ಆಗುತ್ತಿಲ್ಲ. ಕೂಡಲೇ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಜಿಪಂ ಸಿಇಒ ಸುರೇಶ್ ಇಟ್ನಾಳ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸೂಚನೆ ನೀಡಿದರು. ಜಿ.ಪಂ. ಸಿಇಒ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

**ಕರ್ನಾಟಕ ಪಬ್ಲಿಕ್ ಶಾಲೆಗೆ ಭೇಟಿ:** ಶಾಸಕ ಬಸವಂತಪ್ಪ ಮಾಯಕೊಂಡ ಗ್ರಾಮಕ್ಕೆ ತೆರಳಿ ಗ್ರಾಮದ ಕೆಪಿಎಸ್ ಶಾಲೆ ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ಸಭೆ ನಡೆಸಿ ಶಾಲಾ-ಕಾಲೇಜು ಅಭಿವೃದ್ಧಿ ಬಗ್ಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಕಡಿಮೆ ಬಂದಿರುವುದಕ್ಕೆ ಶಿಕ್ಷಕರನ್ನು ತರಾಟೆ ತೆಗೆದುಕೊಂಡರು.


ಮುಂದಿನ ಬಾರಿಯಾದರೂ ಶಾಲೆಗೆ ಉತ್ತಮ ಫಲಿತಾಂಶ ತರಲು ಶಿಕ್ಷಕರು ಶ್ರಮಿಸಬೇಕು. ಬಳಿಕ ಶಾಲಾ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಸಿದರು. ಈ ವೇಳೆ ಪ್ರಾಂಶುಪಾಲ ಡಿ. ಬಸವರಾಜ್, ಉಪ ಪ್ರಾಂಶುಪಾಲರು, ಸಹ ಶಿಕ್ಷಕರು ಹಾಗೂ ಎಲ್ಲಾ ಶಾಲಾ ಸಿಬ್ಬಂದಿಗಳು, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಮುಖಂಡರಾದ ಮೆಡಿಕಲ್ ರುದ್ರೇಶಣ್ಣ, ಜಗದೀಶ್ ಇದ್ದರು.


WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES
Interested Parties may contact at :
M/s R.Hanumanthappa & Son
Hanumanthappa Buildings,
Poona - Bangalore Road, Davangere - 577 002.
Ph. : 258834 / 94498 28834

MOTHERE'S TOUCH SCHOOL
We Are hiring Teachers who are Passionate openings for Nursery Teachers, PE Teacher & Urdu Teacher
REQUIRMENT
* NTC or Bachelor's Degree
* B.PEd for PE Teacher
* Urdu Proficiency for urdu teacher
Contact : 9380474762, 8550850010
2nd main, 2nd cross, saysam layout Nittuvalli, Davangere-2.

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
ರಶ್ಮಿ ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆ
ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು
BA, B.Com, B.Sc., ವಿದ್ಯಾರ್ಹತೆಯುಳ್ಳವರು ಮತ್ತು B.Ed, ಶಿಕ್ಷಕರು/ಶಿಕ್ಷಕಿಯರು ಬೇಕಾಗಿದ್ದಾರೆ.
ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : 82771 67890

MATRUCHAYA HEALTH CARE
(Mother & child care Hospital)
2nd cross siddaveerappa Layout, Shamanuru Road, Dvg
HOSPITAL STAFF VACANCY
1) Senior Nurses (GNM) - 3
2) Junior Nurses (GNM) - 3
3) OT Nurses - 2 , 4) Pharmacist - 2
5) Receptionist - 2
Salary based on Eligibility & Exp.
Apply with Biodata, Degree Certificate & Addr. Proof.
Accomadation Available
Conact no. 78298 08443, 97427 62462

ಶ್ರೀ ಸಿದ್ಧಿ ವಿನಾಯಕ ಎಜ್ಯುಕೇಷನಲ್ ಟ್ರಸ್ಟ್ (ರಿ)
#106/6 ಪಿ.ಜೆ. ಬಡಾವಣೆ, ರೈತರ ಬೀದಿ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.
ನಗರದ ಪಿ.ಜೆ. ಬಡಾವಣೆಯಲ್ಲಿ, ನಿಮ್ಮ ಮುದ್ದುಮಕ್ಕಳಿಗಾಗಿ
ಅರ್ನವ್ ಕಿಡ್ಸ್
Play home



ಸೌಲಭ್ಯಗಳು
• ವ್ಯವಸ್ಥಿತ ಹಾಗೂ ಮಗುವಿನ ಕಲಿಕೆಗೆ ಉತ್ತಮವಾದ ವಾತಾವರಣ
• ಎಲ್ಲಾ ಲಭ್ಯ ಶಾಲಾ ಕೊಠಡಿಗಳು.
• ಹೊರೆಯಲ್ಲದ ಶಾಲಾ ಶುಲ್ಕದ ವ್ಯವಸ್ಥೆ.
• ಮಗುವಿನ ಕಲಿಕೆಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ .
• ಸ್ಪರ್ಧಾತ್ಮಕ ಜಗತ್ತಿಗೆ ಸರಿಯಾದ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು
ಸೀಮಿತ ಸೀಟುಗಳು ಇರುವುದರಿಂದ ಇಂದೇ ಸಂಪರ್ಕಿಸಿ.
ಮೊ : 99022 79722, 97421 10700, 88846 73728, 91645 05229
ತ್ಯಾವಣಗಿ ವೀರಭದ್ರಸ್ವಾಮಿ ಅಧ್ಯಕ್ಷರು
ಪ್ರಕಾಶ್ ಕೆ. ಕಾರ್ಯದರ್ಶಿಗಳು


# ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.7ರಷ್ಟು ಬೆಳವಣಿಗೆ

ಮುಂಬೈ, ಮೇ 30 – ಭಾರತದ ಆರ್ಥಿಕತೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.7ರಷ್ಟು ಬೆಳವಣಿಗೆ ಕಾಣಲಿದೆ. ಸಮಗ್ರ ಆರ್ಥಿಕ ವ್ಯವಸ್ಥೆಯ ಮೂಲಭೂತ ಸೌಲಭ್ಯಗಳು ಬಲವಾಗುವುದರೊಂದಿಗೆ, ಭಾರತ ವಿಶ್ವದ ಪ್ರಮುಖ ಆರ್ಥಿಕತೆಗಳ ಪೈಕಿ ವೇಗದ ಬೆಳವಣಿಗೆ ಕಾಣಲಿದೆ ಎಂದು ರಿಸರ್ವ್ ಬ್ಯಾಂಕ್‌ನ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ.

ಹಣದುಬ್ಬರ ಕಡಿಮೆಯಾಗಲಿದೆ ಎಂದು ರಿಸರ್ವ್ ಬ್ಯಾಂಕ್ ನಿರೀಕ್ಷಿಸಿದೆಯಾದರೂ, ಪೂರೈಕೆ ಮೇಲೆ ಆಗುವ ಪರಿಣಾಮಗಳಿಂದ ಆಹಾರ ಹಣದುಬ್ಬರದ ಬಗ್ಗೆ ನಿಗಾ ವಹಿಸಬೇಕಿದೆ ಎಂದು ಹೇಳಿದೆ.

ರಿಸರ್ವ್ ಬ್ಯಾಂಕ್‌ನ ಅಥಾವೆ ಪತ್ರಿಕೆ ಶೇ.11.08ರಷ್ಟು ಹೆಚ್ಚಳವಾಗಿ ಕಳೆದ ಮಾರ್ಚ್ 31ರಂದು 70.48 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಇದು ಪಾಕಿಸ್ತಾನದ ಒಟ್ಟು ಆರ್ಥಿಕತೆಯ 2.5ರಷ್ಟು ಹೆಚ್ಚಾಗಿದೆ. ಭಾರತದ ಆರ್ಥಿಕತೆ 2023-24ರಲ್ಲಿ ವೇಗವಾಗಿ ಬೆಳೆದಿದೆ. ಆರ್ಥಿಕ ಬೆಳವಣಿಗೆ ಶೇ.7.6ರಷ್ಟಿದೆ. ಅದಕ್ಕೂ ಹಿಂದಿನ ವರ್ಷ ಬೆಳವಣಿಗೆ ದರ ಶೇ.7ರಷ್ಟಿತ್ತು. ಸತತ ಮೂರು ವರ್ಷ ಆರ್ಥಿಕ ಬೆಳವಣಿಗೆ ದರ ಶೇ.7ಕ್ಕಿಂತ ಹೆಚ್ಚಾಗಿದೆ.

### ಭದ್ರಾ ಜಲಾಶಯ



ನೀರಿನ ಮಟ್ಟ : 117 ಅಡಿ 2 ಇಂಚು
ಒಳ ಹರಿವು : 483 ಕ್ಯೂಸೆಕ್ಸ್
ಹೊರ ಹರಿವು : 379 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 7 ಇಂಚು

# ಕನ್ಯಾಕುಮಾರಿಯಲ್ಲಿ ಧ್ಯಾನ ಆರಂಭಿಸಿದ ಪ್ರಧಾನಿ

ಕನ್ಯಾಕುಮಾರಿ, ಮೇ 30 – ಲೋಕಸಭಾ ಚುನಾವಣಾ ಪ್ರಚಾರಕ್ಕೆ ತೆರೆ ಬಿದ್ದ ನಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮಿಳುನಾಡಿನ ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ಶಿಲಾ ಸ್ಮಾರಕದಲ್ಲಿ 45 ಗಂಟೆಗಳ ಧ್ಯಾನ ಆರಂಭಿಸಿದ್ದಾರೆ. ತಿರುವನಂತಪುರಂಗೆ ಹೆಲಿಕಾಪ್ಟರ್‌ನಲ್ಲಿ ಬಂದ ಮೋದಿ, ಭಗವತಿ ಅಮ್ಮನ್ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ನಂತರ ದೋಣಿಯಲ್ಲಿ ಶಿಲಾ ಸ್ಮಾರಕ್ಕಕೆ ತೆರಳಿ ಧ್ಯಾನ ಆರಂಭಿಸಿದ್ದಾರೆ. ಜೂನ್ 1ರವರೆಗೆ ಅವರು ಧ್ಯಾನದಲ್ಲಿ ತೊಡಗಲಿದ್ದಾರೆ. ಜೂನ್ 1ರಂದು ಇಲ್ಲಿಂದ ತೆರಳುವ ಮುಂಚೆ ಸ್ಮಾರಕದ ಪಕ್ಕದಲ್ಲಿರುವ ತಿರುವಳ್ಳುವರ್ ಪ್ರತಿಮೆಗೆ ಅವರು ಭೇಟಿ ನೀಡುವ ಸಾಧ್ಯತೆ ಇದೆ.

# ತಂದೆ, ತಮ್ಮನ ಹತ್ಯೆ : ಮೃತದೇಹಗಳ ತುಂಡರಿಸಿ ಫ್ರಿಜ್‌ನಲ್ಲಿಟ್ಟ ಪ್ರಕರಣದಲ್ಲಿ ಬಾಲಕಿಯ ಬಂಧನ

ನವದೆಹಲಿ, ಮೇ 30 – ತಂದೆ ಹಾಗೂ ಎಂಟು ವರ್ಷದ ತಮ್ಮನನ್ನು ಹತ್ಯೆಗೈದು, ಮೃತದೇಹಗಳನ್ನು ಫ್ರಿಜ್‌ನಲ್ಲಿ ತುರುಕಿದ್ದ ಪ್ರಕರಣದಲ್ಲಿ 15 ವರ್ಷದ ಬಾಲಕಿಯನ್ನು ಪೊಲೀಸರು ಬಂಧಿಸಿದ್ದಾರೆ.

19 ವರ್ಷದ ವ್ಯಕ್ತಿಯ ಜೊತೆ ಬಾಲಕಿ ಸಂಬಂಧ ಹೊಂದಿದ್ದಳು. ಈ ಸಂಬಂಧ ಒಪ್ಪದ ತಂದೆಯನ್ನು ಗೆಳೆಯ ಹಾಗೂ ಬಾಲಕಿ ಹತ್ಯೆ ಮಾಡಿದ್ದಾರೆ.

ಮತ್ತು ಮೃತದೇಹವನ್ನು ಕತ್ತರಿಸಿ ಫ್ರಿಜ್‌ನಲ್ಲಿ ಇಟ್ಟಿದ್ದಾರೆ. ಈ ಕೃತ್ಯ ಎಸಗುವ ವೇಳೆ, ಮಲಗಿದ್ದ ತಮ್ಮ ಎದ್ದ ಕಾರಣ ಆತನನ್ನೂ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಮಾರ್ಚ್ 15ರಂದು ತಂದೆ ಹಾಗೂ ಮಗನ ಮೃತದೇಹ ಫ್ರಿಜ್‌ನಲ್ಲಿ ಇಟ್ಟಿದ್ದು ಕಂಡು ಬಂದಿತ್ತು. ಮೊದಲು ಬಾಲಕಿಯ 19 ವರ್ಷದ ಗೆಳೆಯ ಮೇಲೆ ಪೊಲೀಸರಿಗೆ ಸಂಶಯವಿತ್ತು.

ಸಿ.ಸಿ.ಟಿ.ವಿ.ಯಲ್ಲಿ ಗೆಳೆಯನ ಜೊತೆ ಬಾಲಕಿ ಇರುವುದು ಕಂಡುಬಂದ ನಂತರ ಇಬ್ಬರ ಮೇಲೂ ಸಂಶಯವಾಗಿತ್ತು.

ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯ ಬಾಲಕಿ ಹಾಗೂ ಗೆಳೆಯ ಹತ್ಯೆ ಎಸಗಿ ತಪ್ಪಿಸಿಕೊಂಡಿದ್ದರು. ಉಭಯರು ಹರಿದ್ವಾರದ ಜಿಲ್ಲಾ ಆಸ್ಪತ್ರೆಯಲ್ಲಿ ಸಂಶಯಾಸ್ಪದವಾಗಿ ಸಂಚರಿಸುತ್ತಿದ್ದರು.

ಆಗ ಬಾಲಕಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರೆ, ಗೆಳೆಯ ತಪ್ಪಿಸಿಕೊಂಡಿದ್ದಾನೆ. ವಿಚಾರಣೆ ನಡೆಸಿದಾಗ ಬಾಲಕಿ ಹತ್ಯೆ ಮಾಡಿರುವುದನ್ನು ಒಪ್ಪಿಕೊಂಡಿರುವುದಾಗಿ ಪೊಲೀಸರು ಹೇಳಿದ್ದಾರೆ.

ಹತ್ಯೆಗೆ ಮುಂಚೆ 19 ವರ್ಷದ ವ್ಯಕ್ತಿಯ ವಿರುದ್ಧ ಬಾಲಕಿ ಪೋಕ್ಸೋ ಕಾಯ್ದೆಯಡಿ ಲೈಂಗಿಕ ಪೀಡನೆಯ ದೂರು ದಾಖಲಿಸಿದ್ದಳು. ಈ ಪ್ರಕರಣದಲ್ಲಿ ವ್ಯಕ್ತಿಗೆ ಜೈಲು ಶಿಕ್ಷೆಯೂ ಆಗಿತ್ತು. ನಂತರದಲ್ಲಿ ಆತ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ.

# ಬಸ್ ಹಳ್ಳಕ್ಕೆ ಉರುಳಿ 21 ಯಾತ್ರಿಗಳ ಸಾವು

ಜಮ್ಮು, ಮೇ 30 – ಯಾತ್ರಿಗಳಿದ್ದ ಬಸ್ ಒಂದು ಹಳ್ಳಕ್ಕೆ ಉರುಳಿ 21 ಜನ ಸಾವನ್ನಪ್ಪಿದ ಹಾಗೂ 47 ಜನ ಗಾಯಗೊಂಡ ಘಟನೆ ಜಮ್ಮು ಜಿಲ್ಲೆಯಲ್ಲಿ ನಡೆದಿದೆ.

ಟುಂಗಿ - ಮೊರ್ಹ್ ಎಂಬಲ್ಲಿ ಅಪಘಾತ ನಡೆದಿದೆ. ಬಸ್ 150 ಅಡಿ ಆಳದ ಹಳ್ಳಕ್ಕೆ ಉರುಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹರಿಯಾಣದ ಕುರುಕ್ಷೇತ್ರದ ಯಾತ್ರಿಗಳು ಜಮ್ಮು ಮತ್ತು ಕಾಶ್ಮೀರದ ಪೌನಿ ಎಂಬಲ್ಲಿನ ಶಿವ್ ಖೋರಿಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಗಾಯಗೊಂಡವರ ಪೈಕಿ ಆರು ಜನರ ಪರಿಸ್ಥಿತಿ ಸೂಕ್ಷ್ಮವಾಗಿದೆ. ಎಲ್ಲಾ ಗಾಯಾಳುಗಳನ್ನು ಜಮ್ಮುವಿನ ಜಿ.ಎಂ.ಸಿ. ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಲಕ ತೀವ್ರ ತಿರುವಿನಲ್ಲಿ ಬಸ್ ಚಲಾಯಿಸುತ್ತಿದ್ದಾಗ, ಎದುರಿನಿಂದ ವೇಗವಾಗಿ ಕಾರೊಂದು ಬಂದಿತು. ಆಗ ಬಸ್ ಹಳ್ಳಕ್ಕೆ ಉರುಳಿದೆ ಎಂದು ಗಾಯಗೊಂಡಿರುವ ಅಮರ್ ಚಾಂದ್ ತಿಳಿಸಿದ್ದಾರೆ.


ಅಭಿವೃದ್ಧಿ
ಮದುವೆ ಸಮಾರಂಭಗಳ ಪ್ರಯುಕ್ತ
ಸಿಲ್ಕ್ ಇಂಡಿಯ® 2024
Last 3 Days



ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹರಾಷ್ಟ್ರ : ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

24 ಮೇ ಯಿಂದ 2 ಜೂನ್ 2024 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಪೂಜಾ ಇಂಟರ್‌ನ್ಯಾಷಿನಲ್
ಪಿ.ಬಿ. ರಸ್ತೆ, ದಾವಣಗೆರೆ
up to 30% Discount
Entry Free | All Credit & Debit Cards Accepted | Contact : 63641 65152
Organised by : abhivrudhi


## ಸಾರ್ವಜನಿಕ ಪ್ರಕಟಣಾ ನೋಟೀಸ್

ನಮ್ಮ ಕಕ್ಷಿಗಾರರಾದ 1ನೇ ಶ್ರೀಮತಿ ರತ್ನಮ್ಮ ಕೋಂ. ಸಿ.ಎನ್. ದೇವಪ್ಪ 2ನೇ ಶ್ರೀಮತಿ ಉಮಾದೇವಿ ಕೋಂ ಹನುಮಂತಪ್ಪ ಸಿ.ಎನ್. ವಾಸ : ಕಡ್ಲೆಬಾಳು ಗ್ರಾಮ, ದಾವಣಗೆರೆ ತಾ|| ಜಿ. 3ನೇ ಶ್ರೀಮತಿ ಪ್ರೇಮಾ ಕೋಂ ಹನುಮಂತಪ್ಪ ಎನ್.ಹೆಚ್. ವಾಸ : ಆನೆಕೊಂಡ, ದಾವಣಗೆರೆ 4ನೇ ಶ್ರೀಮತಿ ಸುಮಿತ್ರಮ್ಮ ಕೋಂ ಸಿದ್ದೇಶ್, ಕೆ.ಎಸ್., ವಾಸ : ಆಲೂರು ಗ್ರಾಮ, ದಾವಣಗೆರೆ ತಾ|| ಜಿ||, 5ನೇ ಶ್ರೀಮತಿ ಪುಷ್ಪ ಕೋಂ ಎಸ್.ಜಿ. ಶಿವಾನಂದಪ್ಪ, ವಾಸ : ನಿಟ್ಟೂರು ಗ್ರಾಮ, ಹರಿಹರ ತಾ|| ದಾವಣಗೆರೆ ಜಿ|| ಆದ ಇವರುಗಳ ಮಾಹಿತಿ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣಾ ನೋಟೀಸ್ ನೀಡಲಾಗಿದೆ.

ನಮ್ಮ ಕಕ್ಷಿಗಾರರ ತಂದೆಯವರಾದ ಶ್ರೀಯುತ ದಿ|| ಬಾನಪ್ಪ ಚಿಕ್ಕನಹಳ್ಳಿ ಇವರಿಗೆ ಒಟ್ಟು ನಾಲ್ಕು ಜನ ಗಂಡು ಮಕ್ಕಳು, ಐದು ಜನ ಹೆಣ್ಣು ಮಕ್ಕಳಿರುತ್ತಾರೆ. ಇವರೆಲ್ಲರೂ ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ. ನಮ್ಮ ಕಕ್ಷಿಗಾರರ ಸಹೋದರರಾದ ಬಿ. ಚಂದ್ರಪ್ಪ ಇವರು 2004ರಲ್ಲಿ ಪೌತಿಯಾಗಿರುತ್ತಾರೆ. ಇವರ ಕುಟುಂಬ ಶ್ರೀಮತಿ ನಿರ್ಮಲ ಹಾಗೂ ಇವರ ಒಬ್ಬನೇ ಮಗನಾದ ಶ್ರೀ ಬನೇಶ್ ಎಂದು ಇರುತ್ತಾರೆ.

ಈ ಕೆಳಕಂಡ ಷೆಡ್ಯೂಲ್ ಸೊತ್ತು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ನಮ್ಮ ಕಕ್ಷಿದಾರರಿಗೆ ಸದರಿ ಸೊತ್ತಿನಲ್ಲಿ ಸಮ ಹಿಸ್ಸೆ ಆಸ್ತಿ ಹಕ್ಕು ಇರುತ್ತದೆ. ಇತ್ತೀಚೆಗೆ ಶ್ರೀಮತಿ ನಿರ್ಮಲ ಕೋಂ ಲೇಟ್ ಚಂದ್ರಪ್ಪ ಹಾಗೂ ಇವರ ಮಗನಾದ ಶ್ರೀ ಬನೇಶ್ ಆದ ಇವರುಗಳು ನಮ್ಮ ಕಕ್ಷಿಗಾರರ ಅನುಮತಿ ಇಲ್ಲದೇ ಷೆಡ್ಯೂಲ್ ಸೊತ್ತಿನ ಖಾತೆಯನ್ನು ಒಳಗಿಂದೊಳಗೆ ತಮ್ಮ ಹೆಸರಿಗೆ ಬದಲಾಯಿಸಿಕೊಂಡು, ಬೇರೆಯವರಿಗೆ ಪರಭಾರೆ ಮಾಡುವ ಹುನ್ನಾರ ನಡೆಸಿದ್ದಾರೆ ಎಂದು ನಮ್ಮ ಕಕ್ಷಿಗಾರರ ಗಮನಕ್ಕೆ ಬಂದಿರುತ್ತದೆ. ಷೆಡ್ಯೂಲ್ ಸೊತ್ತಿನ ಬಗ್ಗೆ ಶ್ರೀಮತಿ ನಿರ್ಮಲ ಕೋಂ. ಲೇಟ್ ಚಂದ್ರಪ್ಪ ಹಾಗೂ ಶ್ರೀಬನೇಶ್ ಇವರುಗಳಿಂದ ಸಾರ್ವಜನಿಕರಾಗಲೀ ಅಥವಾ ಯಾವುದೇ ಹಣಕಾಸು ಸಂಸ್ಥೆಯಾಗಲೀ ವ್ಯವಹಾರ (ಕರಾರು ಪತ್ರ, ಅಡವು, ದಾನಪತ್ರ, ವಿಲ್ ಇತ್ಯಾದಿ) ಮಾಡಬಾರದೆಂದು ಈ ನೋಟೀಸ್ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಯಾರಾದರೂ ಷೆಡ್ಯೂಲ್ ಸೊತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿಕೊಂಡಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿಗಾರರಿಗೆ ಬಂಧನಕಾರಿಯಾಗುವುದಿಲ್ಲ ಮತ್ತು ಮುಂದೆ ಆಗುವ ಪರಿಣಾಮಗಳಿಗೆ ಹಾಗೂ ಕೋರ್ಟ್ ಖರ್ಚು-ವೆಚ್ಚಗಳಿಗೆ ತಾವೇ ಬಾಧ್ಯಸ್ಥರು ತಿಳಿಯಿರಿ.

ಷೆಡ್ಯೂಲ್ : ದಾವಣಗೆರೆ ತಾ|| ಕಸಬಾ ಹೋಬಳಿ, ಬಸಾಪುರ ಗ್ರಾಮದ ಸರ್ವೆ ನಂ. 12/4ರಲ್ಲಿ ಇರುವ 01 ಎಕರೆ, 05 ಗುಂಟೆ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ : ಕಾರ್ತಿಕ ಬಿನ್ ಯೋಗಿ, ವಸಂತ್ ಕುಮಾರ್ ಬಿನ್ ಮಲ್ಲಿಕಾರ್ಜುನ್, ಗಿರೀಶ್ ಬಿನ್ ತಿಪ್ಪೇಶ್ ರಾವ್, ಪ್ರಕಾಶ್ ಬಿನ್ ಚನ್ನಬಸಪ್ಪ ಇವರುಗಳ ಜಮೀನು, ಪಶ್ಚಿಮಕ್ಕೆ : ನಾಗೇಂದ್ರಪ್ಪ ಬಿನ್ ಸಿದ್ದಣ್ಣ ಹಾಗೂ ಹನುಮಂತಪ್ಪ ಇವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಸ್ತೆ.

ಸಹಿ/- ವಕೀಲರು
ಎಸ್. ನಾಗರಾಜ್, ಬಿ.ಕಾಂ. ಎಲ್.ಎಲ್.ಬಿ.,
ಕಛೇರಿ ನಂ.-3, 7ನೇ ಕ್ರಾಸ್, ಪಿ.ಜೆ. ಬಡಾವಣೆ,
ದಾವಣಗೆರೆ. ಮೊ. : 8971942449

ಸಹಿ/-
ಕಕ್ಷಿಗಾರರ ಸಹಿ


ಶುಭಾಶಯಗಳು



ಅಬಕಾರಿ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಇಂದು ನಿವೃತ್ತರಾಗುತ್ತಿರುವ ದಾವಣಗೆರೆ-ಚಿತ್ರದುರ್ಗ ಬಂಟರ ಸಮಾಜದ ಮಹಿಳಾ ಘಟಕದ ಕಾರ್ಯದರ್ಶಿಗಳಾದ
ಶ್ರೀಮತಿ ಜಯಲಕ್ಷ್ಮಿ ಪ್ರಭಾಕರ ಶೆಟ್ಟಿ
ಅವರ ನಿವೃತ್ತ ಜೀವನ ಸುಖಕರವಾಗಿರಲಿ ಹಾಗೂ ನಿಮ್ಮ ಮಾರ್ಗದರ್ಶನದಲ್ಲಿ ಬಂಟರ ಸಮಾಜದ ಚಟುವಟಿಕೆಗಳ ಇನ್ನಷ್ಟು ಹೆಚ್ಚಲಿ ಎಂದು ಶುಭಕೋರುವವರು :

ಶ್ರೀಮತಿ ಲತಿಕಾ ಡಿ. ಶೆಟ್ಟಿ – ಅಧ್ಯಕ್ಷರು
ಡಾ|| ಶುಕ್ಲಾಶೆಟ್ಟಿ – ಸಾಂಸ್ಕೃತಿಕ ಕಾರ್ಯದರ್ಶಿ
ಶ್ರೀಮತಿ ಅಕ್ಷಯ ಯು. ಶೆಟ್ಟಿ – ಖಜಾಂಚಿ
ಶ್ರೀಮತಿ ಸುನೀತಾ ಶೆಟ್ಟಿ – ಜಂಟಿ ಕಾರ್ಯದರ್ಶಿ
ಶ್ರೀಮತಿ ಉಷಾ ಶೆಟ್ಟಿ – ಸಂಘಟನಾ ಕಾರ್ಯದರ್ಶಿ
ಶ್ರೀಮತಿ ರಶ್ಮಿ ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ದಕ್ಷಾ ಎಸ್. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಶೈಲಾ ಎ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಶೀಲಾ ಜೆ. ಶೆಟ್ಟಿ – ಉಪಾಧ್ಯಕ್ಷರು



ದಾವಣಗೆರೆ-ಚಿತ್ರದುರ್ಗ ಬಂಟರ ಸಮಾಜದ ಮಹಿಳಾ ಘಟಕದ ಎಲ್ಲಾ ಸದಸ್ಯರುಗಳು



ADVT



# ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ-2024



## ಆತ್ಮೀಯ ಮನವಿ

**ಆತ್ಮೀಯ ಶಿಕ್ಷಕ, ಉಪನ್ಯಾಸಕ, ಬೋಧಕ ಬಂಧುಗಳೇ,**

ಆಗ್ನೆಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ತಮ್ಮ ಶಾಲೆಯನ್ನೊಳಗೊಂಡಂತೆ ಈಗಾಗಲೇ 680+ ಶಾಲಾ ಕಾಲೇಜ್‌ಗಳಿಗೆ ಭೇಟಿ ನೀಡಿ ನನ್ನ ವಿಚಾರಗಳನ್ನು ತಮ್ಮಲ್ಲಿ ಮನವಿ ಮುಖಾಂತರ ಸಲ್ಲಿಸಿ ಜೂನ್ ತಿಂಗಳಲ್ಲಿ ನಡೆಯುವ ಆಗ್ನೆಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ನನಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಕೋರಿರುತ್ತೇನೆ. ಈ ಸಂದರ್ಭದಲ್ಲಿ ತಾವುಗಳು ನನಗೆ ಪ್ರೋತ್ಸಾಹದ ನುಡಿಗಳನ್ನಾಡಿರುತ್ತೀರಿ. ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮಾನ್ಯರೇ, ಜೂನ್ 2024 ರ ಚುನಾವಣೆ ಒಳಗಾಗಿ 1000 ಶಾಲೆಗಳಿಗೆ ಭೇಟಿ ನೀಡಿ ಸಮಸ್ತ ಶಿಕ್ಷಕ/ ಉಪನ್ಯಾಸಕರು ಗಳನ್ನು ಭೇಟಿ ಮಾಡಿ ಮುಖಾಮುಖಿಯಾಗಿ ಮತವನ್ನು ಯಾಚಿಸುವ ಗುರಿಯನ್ನು ಹೊಂದಿದ್ದು ಸಮಯಾವಕಾಶವಿಲ್ಲದೇ ಇರುವುದರಿಂದ ನಿಮ್ಮ ಶಾಲೆಗೆ ಮತ್ತು ಭೇಟಿ ನೀಡಿದ ಶಾಲೆಗಳಲ್ಲಿನ ಕೆಲವು ಶಿಕ್ಷಕ ಬಂಧುಗಳನ್ನು ಭೇಟಿ ಮಾಡಲು ಸಾಧ್ಯವಾಗಿರುವುದಿಲ್ಲ, ಈ ಬಗ್ಗೆ ತಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ಮಾನ್ಯರೇ, ಇತರೇ ಅಭ್ಯರ್ಥಿಗಳಂತೆ ಆಸೆ ಆಮಿಷ, ಆತಿಥ್ಯ ಹಾಗೂ ಕೊಡುಗೆಗಳನ್ನು ನೀಡಿ ಮತ ಯಾಚಿಸಿ ಬೋಧಕ ವರ್ಗದವರಿಗೆ ಇರುವ ಅಪಾರ ಗೌರವವನ್ನು ಒಬ್ಬ ಶಿಕ್ಷಕರ ಮಗನಾಗಿ ಹಾಳು ಮಾಡಲು ಮತ್ತು ಬೋಧಕ ವೃತ್ತಿಯನ್ನು ಅವಮಾನಿಸುವುದನ್ನು ನಾನು ಬಯಸುವುದಿಲ್ಲ.

ಆತ್ಮೀಯರೇ ನಾನು ಶಿಕ್ಷಣ ಇಲಾಖೆಯಲ್ಲಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು 35 ವರ್ಷಗಳ ಕಾಲ ಹಲವಾರು ಸಂಘಟನೆಗಳಲ್ಲಿ ಗುರುತಿಸಿಕೊಂಡು ನೌಕರರ ಹಲವಾರು ಬೇಡಿಕೆಗಳಿಗೆ ಸಂಬಂಧಿಸಿದಂತೆ ಹೋರಾಟಗಳನ್ನು ಮಾಡುತ್ತಾ ಬಂದಿರುತ್ತೇನೆ. ನನ್ನ ಶಿಕ್ಷಣ ಇಲಾಖೆಯಲ್ಲಿನ ಅನುಭವವನ್ನು ನಿಮ್ಮ ಸೇವೆಯಲ್ಲಿನ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸುವಲ್ಲಿ 24X7 ರೀತಿಯಲ್ಲಿ ಸಲಹೆ ಸಹಕಾರವನ್ನು ಮತ್ತು ಜ್ವಲಂತ ಬೇಡಿಕೆಗಳನ್ನು ಈಡೇರಿಸುವಲ್ಲಿ ಪೂರ್ಣ ಪ್ರಮಾಣದ ಸೇವೆಯನ್ನು ಮಾಡಲು ಸಿದ್ದನಿದ್ದೇನೆ. ದಿನಾಂಕ : 03-06-2024 ರ ಸೋಮವಾರದಂದು ನಡೆಯುವ ಚುನಾವಣೆಯಲ್ಲಿ ತಾವು ಈ ಬಾರಿ ಆಸೆ, ಆಮಿಷ, ಆತಿಥ್ಯ ಮತ್ತು ಕೊಡುಗೆಗಳನ್ನು ನೀಡಿ ಮತ ಯಾಚಿಸುವವರನ್ನು ಧಿಕ್ಕರಿಸಿ ಪ್ರಾಮಾಣಿಕವಾಗಿ ಮತ ಯಾಚಿಸುವ, ವಿಚಾರವಂತ ಮತ್ತು ಹೋರಾಟಗಾರರನ್ನು ಬೆಂಬಲಿಸುವಂತೆ ಮತ್ತು ನನಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ಈ ಬಾರಿ ಚುನಾವಣೆಯಲ್ಲಿ ಗೆಲ್ಲಿಸುವಂತೆ ಕೋರುತ್ತೇನೆ.

### ಮಾನ್ಯ ಶಿಕ್ಷಕರು / ಉಪನ್ಯಾಸಕರು ಹಾಗೂ ಬೋಧಕ ವರ್ಗದವರ ಆದ್ಯ ಗಮನಕ್ಕೆ

1. ಮತದಾನ ಕೇಂದ್ರದಲ್ಲಿ ಪಿ.ಆರ್.ಓ. ನೀಡುವ ಪೆನ್ನಿನಿಂದಲೇ ಸಹಿ ಮಾಡುವುದು.
2. ಪಿ.ಆರ್.ಓ. ನೀಡುವ ಮಾರ್ಕರ್ ಪೆನ್ನಿನಿಂದಲೇ ಪ್ರಥಮ, ದ್ವಿತೀಯ ಮತ್ತು ತೃತೀಯ ಪ್ರಾಶಸ್ತ್ಯದ ಮತವನ್ನು ರೋಮನ್, ಹಿಂದಿ, ಕನ್ನಡ ಮತ್ತು ದೇವನಾಗರಿ ಸಂಖ್ಯೆಯಲ್ಲಿ ನಮೂದಿಸಲು ಅವಕಾಶವಿರುತ್ತದೆ.
3. ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಯಾರಿಗಾದರೂ ಪ್ರಥಮ ಪ್ರಾಶಸ್ತ್ಯದ ಮತ ನೀಡುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ಚಲಾಯಿಸಿದ ಮತ ಪತ್ರವು ಅಸಿಂಧುವಾಗುತ್ತದೆ.
4. ಮತಗಟ್ಟೆಗೆ ಯಾವುದೇ ಇಂಕಿನ ಪೆನ್ನು ಮತ್ತು ನೀರು ಅಥವಾ ದ್ರವ ಪದಾರ್ಥ ಕೊಂಡೊಯ್ಯುವುದನ್ನು ನಿಷೇಧಿಸಿರುತ್ತಾರೆ.
5. ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳಿಗೂ ಇಳಿಕೆ ಕ್ರಮದಲ್ಲಿ ಪ್ರಾಶಸ್ತ್ಯದ ಮತಗಳನ್ನು ನೀಡಲು ಅವಕಾಶವಿರುತ್ತದೆ. ಅಂದರೆ ಈ ಬಾರಿ 15 ಅಭ್ಯರ್ಥಿಗಳು ಸ್ಪರ್ಧಿಸಿದ್ದು ಕ್ರಮ ಸಂಖ್ಯೆ 1 ರಿಂದ 15 ವರೆಗೂ ಪ್ರಾಶಸ್ತ್ಯದ ಮತವನ್ನು ನೀಡಬಹುದಾಗಿದೆ.
6. ನಿಮ್ಮ Enrollment ಸಂಖ್ಯೆ ಹಾಗೂ ಮತದಾನದ ಕೇಂದ್ರದ ವಿವರವನ್ನು ಆಯಾ ತಾಲ್ಲೂಕಿನ ಬಿ ಎಲ್ ಓಗಳು ನಿಮ್ಮ ಮನೆಗೆ ತಲುಪಿಸುವುದು ಕಡ್ಡಾಯವಾಗಿರುತ್ತದೆ.
7. ತಾಲ್ಲೂಕಿನ ಬಿ ಎಲ್ ಓಗಳು ಮತದಾನಕ್ಕಿಂತ 24 ಗಂಟೆಗಳೊಳಗಾಗಿ ಮಾಹಿತಿ ಸ್ಲಿಪ್ಪನ್ನು ತಲುಪಿಸದಿದ್ದಲ್ಲಿ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದು ಮತದಾನ ಕೇಂದ್ರಕ್ಕೆ ತೆರಳುವಂತೆ ಕೋರಿದೆ.

**ಮಾನ್ಯರೇ ನೆನಪಿರಲಿ, ಈ ಬಾರಿ ಮಾಡುವ ಮತದಾನ ಆಸೆ, ಆಮಿಷ, ಆತಿಥ್ಯ ಮತ್ತು ಕೊಡುಗೆಗಳನ್ನು ಧಿಕ್ಕರಿಸಿದ ಮತದಾನವಾಗಲಿ.**

### ನನ್ನ ಆದ್ಯತೆಯ ಭರವಸೆಗಳು :

1 ಶಾಲೆಗಳಲ್ಲಿ ಆಟ್ಯಾಚ್ ವಾಶ್ ರೂಂವುಳ್ಳ ಶಿಕ್ಷಕ ಮತ್ತು ಶಿಕ್ಷಕಿಯರ ಸ್ಟಾಫ್ ರೂಂ ನಿರ್ಮಿಸುವುದು.
2 ಶಿಕ್ಷಕರು, ಶಿಕ್ಷಕಿಯರು ಮತ್ತು ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಸ್ಥಾಪಿಸುವುದು.
3 ಎನ್.ಪಿ.ಎಸ್. ಟು ಓ.ಪಿ.ಎಸ್.ಗೆ ಸರ್ಕಾರದಿಂದ ತುರ್ತು ಆದೇಶ ಪಡೆಯುವುದು.
4 ದಕ್ಷಿಣ ಭಾರತದ ರಾಜ್ಯಗಳಿಗೆ ಸರಿಸಮವಾದ ವೇತನ ಮಂಜೂರಾತಿ ಪಡೆಯುವುದು.
5 ಖಾಸಗಿ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನವನ್ನು ಪಡೆಯುವುದು.

ನೆನಪಿರಲಿ ಬಂಧುಗಳೆ, ಯಾರೇ ನೀಡುವ ಆತಿಥ್ಯ ಮತ್ತು ಕೊಡುಗೆಗಳು ಶಾಶ್ವತವಲ್ಲ, ನಿಮ್ಮ ಮತ ನನ್ನ ಸೇವೆ ಶಾಶ್ವತ.



ವಂದನೆಗಳೊಂದಿಗೆ, ತಮ್ಮ ಸೇವಾಕಾಂಕ್ಷಿ, **ಎನ್.ಈ. ನಟರಾಜ** ಆಗ್ನೇಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ
ನಿಕಟಪೂರ್ವ ರಾಷ್ಟ್ರೀಯ ಉಪಾಧ್ಯಕ್ಷರು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಫೆಡರೇಷನ್ (ರಿ.), ಫರಿದಾಬಾದ್, ಹರಿಯಾಣ. ನಿಕಟಪೂರ್ವ ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಒಕ್ಕೂಟ (ರಿ.), ಬೆಂಗಳೂರು. ನಿಕಟಪೂರ್ವ ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು.
ಮೊ : 9448062675, 8197202441. ವಾಸ : 792/21, ವಿದ್ಯಾನಂದನ ಸ್ಕೂಲ್ ಹಿಂಭಾಗ, ಸರಸ್ವತಿ ಬಡಾವಣೆ, ದಾವಣಗೆರೆ - 577008.

ಮತದಾನದ ದಿನಾಂಕ : 03-06-2024ನೇ ಸೋಮವಾರ. ಸಮಯ : ಬೆಳಿಗ್ಗೆ 8.00 ರಿಂದ ಸಂಜೆ 4.00 ಗಂಟೆಯವರೆಗೆ

| ಕ್ರ.ಸಂ. Sl.No. | ಅಭ್ಯರ್ಥಿಯ ಹೆಸರು NAME OF THE CANDIDATE | | ಪ್ರಾಶಸ್ತ್ಯ ಮತ Preference Vote |
|---|---|---|---|
| 6 | ಎನ್.ಈ. ನಟರಾಜ |  | I |


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas